ಸಂಪುಟ: 01 ಸಂಚಿಕೆ: 94 ಪುಟ: 04 ಬೆಲೆ: 02 ಶನಿವಾರ ಸಪ್ಟೆಂಬರ್ 20 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಜನರ ನುಡಿ.... ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು

Volume:01 Issue: 94 Pages:04 Price:02 SUNDAY SEPTEMBER 20 2026 RNI NO: KNKAN/26/A4008 E-mail:ajathashathru2026@gmail.com




## ಸತ್ಯವಾಣಿ ಕಟೋಕ್ತಿ



ಅವರವರ ಸಾಮಾರ್ಥ್ಯಕ್ಕನ್ನುಗುಣವಾಗಿ ಇತರೆ ವ್ಯಕ್ತಿಗಳನ್ನು ಅಳೆಯಬಹುದೇ ವಿನಾ ನಮ್ಮ ವ್ಯಕ್ತಿತ್ವವನ್ನು ನಮಗಿಂತ ಸುಂದರವಾಗಿ ಯಾರು ತಾನೆ ಅಳೆದು ಅರ್ಥೈಸಲು ಸಾಧ್ಯವಿಲ್ಲ.

ವಾಣಿ ಭಂಡಾರಿ.

# ಸೆಮಿಕಾನ್ ಇಂಡಿಯಾ 2026

## 2ನೇ ದಿನ 10 ಕಂಪನಿಗಳ ಜತೆ ಎಂ.ಬಿ.ಪಾಟೀಲ ಮಾತುಕತೆ

**ಬೆಂಗಳೂರು: ದೆಹಲಿಯಲ್ಲಿ ನಡೆದ ಎರಡು ದಿನಗಳ ಸೆಮಿಕಾನ್ ಇಂಡಿಯಾ–2026 ಸಮಾವೇಶದಲ್ಲಿ ಉನ್ನತ ಮಟ್ಟದ ನಿಯೋಗದೊಂದಿಗೆ ಪಾಲ್ಗೊಂಡಿದ್ದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು ಶುಕ್ರವಾರದಂದು ನೆದರ್ಲೆಂಡ್ಸ್ ಮೂಲದ ಎಎಸ್‌ಎಂಎಲ್ ಸೆಮಿಕಂಡಕ್ಟರ್ಸ್ ಮತ್ತು ನೆಕ್ಸ್ಪೇರಿಯಾ, ಅಮೆರಿಕದ 3ಡಿ ಗ್ಲಾಸ್ ಸೊಲ್ಯೂಷನ್ಸ್, ಎಟಿ&ಎಸ್, ಜಪಾನಿನ ಫ್ಯೂಜಿ ಫಿಲಂ ಮತ್ತು ಲ್ಯಾಮ್ ರೀಸರ್ಚ್ ಸೇರಿದಂತೆ ಹಲವು ಕಂಪನಿಗಳೊಂದಿಗೆ ರಾಜ್ಯದಲ್ಲಿ ಹೂಡಿಕೆ ಮತ್ತು ತಯಾರಿಕಾ ಸ್ಥಾವರ ಆರಂಭಿಸುವಂತೆ ಮಾತುಕತೆ ನಡೆಸಿದ್ದಾರೆ.**

ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿರುವ ಅವರು, ಉಳಿದಂತೆ ಅಪ್ಲೈಡ್ ಮೆಟೀರಿಯಲ್ಸ್, ಎಸ್‌ಎಫ್‌ಎಲ್, ಗೋದಾವರಿ ಕಮಾಡಿಟೀಸ್, ಟೋಕಿಯೋ ಎಲೆಕ್ಟ್ರಾನ್, ಸಿರ್ಮಾ ಎಸ್.ಜಿ.ಎಸ್ ಕಂಪನಿಗಳೊಂದಿಗೆ ಮಾತುಕತೆ ನಡೆಸಿರುವುದಾಗಿ ತಿಳಿಸಿದ್ದಾರೆ.

ಲ್ಯಾಮ್ ರೀಸರ್ಚ್ ಕಂಪನಿಯು ರಾಜ್ಯದಲ್ಲಿ ತನ್ನ ಮಹತ್ವಾಕಾಂಕ್ಷಿ ಯೋಜನೆಗೆ 10 ಸಾವಿರ ಕೋಟಿ ರೂ. ಹೂಡಿಕೆ ಮಾಡುವುದಾಗಿ ಈಗಾಗಲೇ ಘೋಷಿಸಿದೆ. ಸೆಮೆಕಂಡಕ್ಟರ್ ಕ್ಷೇತ್ರದ ಈ ಯೋಜನೆಯನ್ನು ಆದಷ್ಟು ತ್ವರಿತವಾಗಿ



ಅನುಷ್ಠಾನಕ್ಕೆ ತರಲು ಅಗತ್ಯವಿರುವ ಕ್ರಮಗಳೇನೇನು ಎನ್ನುವುದನ್ನು ಚರ್ಚಿಸಲಾಗಿದೆ. ಜತೆಗೆ ಅಪ್ಲೈಡ್ ಮೆಟೀರಿಯಲ್ಸ್ ಕಂಪನಿ ಮಾಡುತ್ತಿರುವ ಹೂಡಿಕೆಯಿಂದ ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಹಾಗೂ ತಯಾರಿಕೆ ಎರಡೂ ಸಾಕಾರಗೊಳ್ಳಲಿದೆ ಎಂದು ಅವರು ಹೇಳಿದ್ದಾರೆ.

ಎಟಿ&ಎಸ್ ಕಂಪನಿ ಕಳೆದ 25 ವರ್ಷಗಳಿಂದಲೂ ನಂಜನಗೂಡಿನಲ್ಲಿ ಅತ್ಯುತ್ತಮ ಗುಣಮಟ್ಟದ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ ತಯಾರಿಸುತ್ತಿದೆ. ಇಲ್ಲಿನ ಸ್ಥಾವರವನ್ನು ವಿಸ್ತರಿಸುವಂತೆ ಮತ್ತು ಹೆಚ್ಚಿನ ಹೂಡಿಕೆ ಮಾಡುವಂತೆ ಹೇಳಲಾಗಿದೆ. ಸೆಮಿಕಂಡಕ್ಟರ್, ವಿದ್ಯುನ್ಮಾನ, ಆರೋಗ್ಯ ಸೇವೆ, ಇಮೇಜಿಂಗ್ ವಲಯಗಳಲ್ಲಿ ಹೆಸರಾಗಿರುವ ಫ್ಯೂಜಿ ಫಿಲಂ ಕಂಪನಿಗೂ ರಾಜ್ಯದಲ್ಲಿ ತಯಾರಿಕಾ ಘಟಕ ಸ್ಥಾಪಿಸುವಂತೆ ಮತ್ತು ಬೆಂಗಳೂರಿನಲ್ಲಿ ಸಂಶೋಧನಾ ಮತ್ತು ಅಭಿವೃದ್ಧಿ ಘಟಕ ನಿರ್ಮಿಸುವಂತೆ ಮನವಿ ಮಾಡಿಕೊಂಡಿದ್ದೇವೆ ಎಂದು ಅವರು ನುಡಿದಿದ್ದಾರೆ.

ವಿದ್ಯುನ್ಮಾನ ವಿನ್ಯಾಸ ಮತ್ತು ಪಿಸಿಬಿ ಜೋಡಣೆಗೆ ಹೆಸರಾಗಿರುವ ಸಿರ್ಮಾ ಎಸ್.ಜಿ.ಎಸ್ ಕಂಪನಿ ಇತ್ತೀಚೆಗಷ್ಟೇ ಬೊಮ್ಮಸಂದ್ರದಲ್ಲಿ ತನ್ನ ತಯಾರಿಕಾ ಘಟಕದ ಕಾರ್ಯಾರಂಭ ಮಾಡಿದೆ. ಇದರ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸುವಂತೆ ಕೋರಿದ್ದೇವೆ. ಇದೇ ರೀತಿಯಲ್ಲಿ ಉಳಿದ ಕಂಪನಿಗಳಿಗೂ ಕರ್ನಾಟಕದಲ್ಲಿ ತಯಾ–ರಿಕಾ ಸ್ಥಾವರಗಳನ್ನು ಅಭಿವೃದ್ಧಿ ಪಡಿಸುವಂತೆ ಗನ ಸೆಳೆಯಲಾಗಿದೆ ಎಂದು ಪಾಟೀಲ ಹೇಳಿದ್ದಾರೆ.

ಮಾತುಕತೆಯಲ್ಲಿ ಎಎಸ್‌ಎಂಎಲ್ ಕಂಪನಿಯ ಉನ್ನತ ಮಟ್ಟದ ಪ್ರತಿನಿಧಿಗಳಾದ ಜೂಸ್ಟ್ ಸ್ಟೀನೆನ್ ಮತ್ತು ಹರ್ಮನ್ ಬೂಮ್, ನೆಕ್ಸ್ಪೇರಿಯಾದ ಹಿರಿಯ ನಿರ್ದೇಶಕ ಹ್ಯಾನ್ಸ್ ವ್ಯಾನ್ ರೇಮ್ಡಂಕ್ ಮತ್ತು ಅಕಿಂ ಕೆಂಪ್, 3ಡಿ ಗ್ಲಾಸ್ ನ ಸಿಇಒ ಬಾಬು ಮಾಂಡವ ಮತ್ತು ನಿರ್ದೇಶಕ ಕೆ.ಕೃಷ್ಣಮೂರ್ತಿ, ಎಟಿ&ಎಸ್ ಕಂಪನಿಯ ಸೈಮನ್ ಸೆಬಾಸ್ಟ್ ಮತ್ತು ಆರ್ ಎಸ್ ಸಿಂಹ, ಲ್ಯಾಮ್ ರೀಸರ್ಚ್ ಪರವಾಗಿ ಸಿಒಒ ಶೇಷ ವರದರಾಜನ್ ಮತ್ತು ರಂಗೇಶ್ ರಾಘವನ್, ಫ್ಯೂಜಿ ಫಿಲಂ ಪರವಾಗಿ ವ್ಯವಸ್ಥಾಪಕ ನಿರ್ದೇಶಕ ಕೋಜಿ ವಾಡ ಮತ್ತು ಅಭಿಶೇಖರ್ ಸಿಂಗ್ ಮಾತುಕತೆಯಲ್ಲಿ ಭಾಗವಹಿಸಿದ್ದರು. ಸಚಿವರ ಜತೆಗಿನ ನಿಯೋಗದಲ್ಲಿ ಕೈಗಾರಿಕಾ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್ ಮತ್ತು ಆಯುಕ್ತೆ ಖುಷ್ಬೂ ಗೋಯೆಲ್ ಇದ್ದರು.

## ಗಣೇಶ ಮೂರ್ತಿಗೆ ಮುಸ್ಲಿಂ ಪಿಂಜಾರ್ ಪಂಚ ಕಮಿಟಿಯಿಂದ ಮಾಲಾರ್ಪಣೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ನಗರದ ಕವಲೂರ ಓಣಿಯಲ್ಲಿ ನಡೆದ ಗಣೇಶ ಮೂರ್ತಿ ವಿಸರ್ಜನಾ ಕಾರ್ಯಕ್ರಮದ ಸಂದರ್ಭದಲ್ಲಿ ಸರದಾರಗಲ್ಲಿ ಮುಸ್ಲಿಂ ಪಿಂಜಾರ್ ಪಂಚ ಕಮಿಟ ವತಿಯಿಂದ ಗಣೇಶ ಮೂರ್ತಿಗೆ ಮಾಲಾರ್ಪಣೆ ಮಾಡಿ, ಸೌಹಾರ್ದತೆಯ ಸಂದೇಶ ಸಾರಲಾಯಿತು. ಈ ಸಂದರ್ಭದಲ್ಲಿ ಪ್ಯಾಟಿ ಬಸವೇಶ್ವರ ದೇವಸ್ಥಾನದ ಅಧ್ಯಕ್ಷರನ್ನು ಸನ್ಮಾನಿಸಿ ಗೌರವಿಸಲಾಯಿತು.**



ವಿವಿಧ ಸಮುದಾಯಗಳ ನಡುವೆ ಪರಸ್ಪರ ಗೌರವ, ಸಹಬಾಳ್ವೆ ಮತ್ತು ಸೌಹಾರ್ದತೆ ಬೆಳೆಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಮುಸ್ಲಿಂ ಪಿಂಜಾರ್ ಪಂಚ ಕಮಿಟಿಯ ಅಧ್ಯಕ್ಷ ಖಾದರಸಾಬ ಕುದ್ರಿಮೋತಿ, ಗೌರವ ಅಧ್ಯಕ್ಷ ಶಾಬುದ್ದೀನಸಾಬ, ಕಾರ್ಯಾಧ್ಯಕ್ಷ ಪಾಶಾಸಾಬ ಮಾನ್ವಿ, ಖಜಾಂಚಿ ಮೀರಾಸಾಬ ಬನ್ನಿಗೋಳ, ಮರ್ದಾನಸಾಬ ಲುಂಗಿ, ರಶೀದ ಅಹ್ಮದ ನೀರಲಗಿ ಸೇರಿದಂತೆ ಪಂಚ ಕಮಿಟಿಯ ಹಲವು ಸದಸ್ಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

**ಅಜಾತ ಶತ್ರು ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

## ಕೆಪಿಎಸ್‌ಸಿ ಹಗರಣ : ಐಎಎಸ್ ಅಧಿಕಾರಿ ಜ್ಞಾನೇಂದ್ರ, ಮಧ್ಯವರ್ತಿ ಕನ್ನಾಳೆ ಇ.ಡಿ. ವಶಕ್ಕೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕೆಪಿಎಸ್‌ಸಿ ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಪ್ರಶ್ನೆಪತ್ರಿಕೆ ಲೀಕ್ ಹಾಗೂ ಕೋಟ್ಯಂತರ ರೂಪಾಯಿ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ ತನಿಖೆಯನ್ನು ತೀವ್ರಗೊಳಿಸಿದೆ.**

**ವಿಚಾರಣೆಗೆ** ಸರಿಯಾಗಿ ಸಹ ಕ–ರಿಸದ ಹಿನ್ನೆಲೆಯಲ್ಲಿ ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್ ಮತ್ತು ಮಧ್ಯವರ್ತಿ ಬಸವರಾಜು ಕನ್ನಾಳೆಯನ್ನು ಇ.ಡಿ ಅಧಿಕಾರಿಗಳು ಬಂಧಿಸಿ, ತಮ ವಶಕ್ಕೆ ಪಡೆದುಕೊಂಡಿದ್ದಾರೆ. ಕಳೆದ ನಾಲ್ಕು ದಿನಗಳಿಂದ ಇಡಿ ಅಧಿಕಾರಿಗಳು ಇಬ್ಬರೂ ಆರೋಪಿಗಳನ್ನು ಜೈಲಿನಲ್ಲೇ ಸುದೀರ್ಘ ವಿಚಾರಣೆಗೆ ಒಳಪಡಿಸಿದ್ದರು. ಆದರೆ, ಅಧಿಕಾ–ರಿಗಳ ಪ್ರಶ್ನೆಗಳಿಗೆ ಸರಿಯಾಗಿ ಸ್ಪಂದಿಸದೆ ವಿಚಾರಣೆಗೆ ಅಸಹಕಾರ ತೋರಿದ ಹಿನ್ನೆಲೆಯಲ್ಲಿ, ಇಡಿ ಅಧಿಕಾ–ರಿಗಳು ಇಬ್ಬರನ್ನೂ ಬಂಧಿಸಿ, ತಡರಾತ್ರಿ ಇ.ಡಿ ಸ್ಪೆಷಲ್



ಕೋರ್ಟ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗಾಗಿ ತಮ ವಶಕ್ಕೆ ಪಡೆದು ಇಡಿ ಕಚೇರಿಯಲ್ಲಿ ಇಬ್ಬರ ವಿಚಾರಣೆ ನಡೆಸುತ್ತಿದ್ದಾರೆ.

ನೇಮಕಾತಿ ಹಗರಣದಲ್ಲಿ ಅಭ್ಯರ್ಥಿಗಳಿಂದ ಕೋಟ್ಯಾಂತರ ರೂಪಾಯಿ ಲಂಚ ವಸೂಲಿ ಮಾಡಿರುವ ಗಂಭೀರ ಆರೋಪ ಜ್ಞಾನೇಂದ್ರ ಕುಮಾರ್ ಮೇಲಿದೆ. ಈ ಅಕ್ರಮ ಹಣದಿಂದ ಜ್ಞಾನೇಂದ್ರ ಅವರು ತಮ ಗೆಳತಿಗೆ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಖರೀದಿಸಿ ನೀಡಿದ್ದರು. ಅಷ್ಟೇ ಅಲ್ಲದೆ, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ತಮ ಅಣ್ಣನ ಹೆಸ–ರಿನಲ್ಲಿ ಐಷಾರಾಮಿ ವಿಲ್ಲಾ ಖರೀದಿಸಿರುವುದು ಸಿಐಡಿ ತನಿಖೆ ವೇಳೆ ಬೆಳಕಿಗೆ ಬಂದಿದೆ.

400 ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ತನಿಖೆ: ಕೆಪಿಎಸ್‌ಸಿ 400 ಹುದ್ದೆಗಳ ನೇಮಕಾತಿಗೆ ನಡೆಸಿದ ಈ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಅಭ್ಯರ್ಥಿಗಳಿಂದ ಹಣ ಪಡೆಯುವುದು ಹಾಗೂ ಉತ್ತರ ಪತ್ರಿಕೆಗಳಲ್ಲಿನ ಅಕ್ರಮಗಳ ಆರೋಪಗಳು ತನಿಖೆಯ ಕೇಂದ್ರಬಿಂದುವಾಗಿವೆ. ಗಂಗ್ವಾರ್ ಅವರು 2024ರಿಂದ ಮಾ. 2026ರವರೆಗೆ ಕೆಪಿಎಸ್‌ಸಿ ಯ ಪರೀಕ್ಷಾ ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದರು. ಸಿಐಡಿ ತನಿಖೆಯಲ್ಲಿ ಕೆಲವು ಅಭ್ಯರ್ಥಿಗಳು ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿ ಹಣ ಪಾವತಿಸಿದ್ದರೆಂಬ ಆರೋಪಗಳು ಬೆಳಕಿಗೆ ಬಂದಿವೆ. ತನಿಖಾಧಿಕಾರಿಗಳ ಪ್ರಕಾರ, 24 ಅಭ್ಯರ್ಥಿಗಳಿಂದ 12 ಕೋಟಿ ರೂ.ಗೂ ಅಧಿಕ ಹಣ ಸಂಗ್ರಹವಾಗಿರಬಹುದು ಎಂಬ ಅಂಶವೂ ತನಿಖೆಯಲ್ಲಿ ಕಂಡುಬಂದಿದೆ. ಪ್ರಶ್ನೆಪತ್ರಿಕೆ ಪರೀಕ್ಷೆಗೆ ಮುನ್ನವೇ ಮಧ್ಯವರ್ತಿಗಳಿಗೆ ತಲುಪಿತ್ತು ಎಂಬ ಆರೋಪವೂ ಗೊತ್ತಾಗಿದೆ.

ಕನ್ನಾಳೆ ಮೂಲಕ ಹಣದ ವಹಿವಾಟಿನ ಆರೋಪ ತನಿಖೆಯಲ್ಲಿ ಬಸವರಾಜ್ ಕನ್ನಾಳೆ ಪ್ರಮುಖ ಮಧ್ಯವರ್ತಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಕೆಲವು ಅಭ್ಯರ್ಥಿಗಳಿಂದ ಹಣವನ್ನು ಬ್ಯಾಂಕ್ ವರ್ಗಾವಣೆ ಸೇರಿದಂತೆ ವಿವಿಧ ಮಾರ್ಗಗಳ ಮೂಲಕ ಪಡೆದಿರುವುದರ ಕುರಿತು ಸಿಐಡಿ ಮಾಹಿತಿ ಸಂಗ್ರಹಿಸಿದೆ. 12 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಅಕ್ರಮ ಅನುಕೂಲ ಪಡೆಯಲು ಹಣ ಪಾವತಿಸಿರುವ ಬಗ್ಗೆ ತನಿಖೆಯಲ್ಲಿ ಸುಳಿವು ಸಿಕ್ಕಿದೆ ಎಂದು ವರದಿಯಾಗಿದೆ. ಕೆಲವು ಅಭ್ಯರ್ಥಿಗಳಿಂದ ಪಡೆದ ಹಣದ ಒಂದು ಭಾಗವನ್ನು 52 ಲಕ್ಷ ರೂ.ಮೌಲ್ಯದ ಚಿನ್ನ ಮತ್ತು ವಜ್ರಾಭರಣ ಖರೀದಿಗೆ ಬಳಸಲಾಗಿದೆ ಎಂಬ ಆರೋಪವೂ ಇದೆ. ಹಣದ ವಹಿವಾಟು, ಬ್ಯಾಂಕ್ ದಾಖಲೆಗಳು, ಸಿಸಿ ಟಿವಿ ದಶ್ಯಗಳು ಮತ್ತು ಕರೆ ವಿವರಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

## ಅತೀ ವೇಗ ತಂದ ಆಪತ್ತು : ಅಂಗಡಿಗೆ ಬೈಕ್ ಡಿಕ್ಕಿಯಾಗಿ ಇಬ್ಬರು ಬಿಇ ವಿದ್ಯಾರ್ಥಿಗಳ ದುರ್ಮರಣ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರ: ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಅತೀ ವೇಗವಾಗಿ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಅಂಗಡಿಗೆ ಡಿಕ್ಕಿ ಹೊಡೆದು ನಂತರ ಕಾಂಪೌಂಡ್‌ಗೆ ಅಪ್ಪಳಿಸಿದ ಪರಿಣಾಮ ಇಬ್ಬರು ಎಂಜಿನಿಯರ್ ವಿದ್ಯಾರ್ಥಿಗಳು ಮೃತಪಟ್ಟಿರುವ ಘಟನೆ ಇಂದು ಬೆಳಗಿನ ಜಾವ ಯಲಹಂಕ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.**

ಮೂಲತಃ ಚಿಕ್ಕಮಗಳೂ–ರಿನ ನಿವಾಸಿಗಳಾದ ವಚನ್ (20) ಮತ್ತು ಕ್ರಿಶಾಂತ್ (20)ಮೃತಪಟ್ಟ ಎಂಜಿನಿಯ–ರಿಂಗ್ ವಿದ್ಯಾರ್ಥಿಗಳು.ವಚನ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಹಾಗೂ ಕ್ರಿಶಾಂತ್ ನಿಟ್ಟೆ ಮೀನಾಕ್ಷಿ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡುತ್ತಿದ್ದ ಇವರಿಬ್ಬರು ಸ್ನೇಹಿತರಾಗಿದ್ದು, ದಿಬ್ಬೂರಹಳ್ಳಿಯಲ್ಲಿ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ನೆಲೆಸಿದ್ದರು. ರಾಯಲ್ ಎನ್‌ಫೀಲ್ಡ್ ಬೈಕ್ ತೆಗೆದುಕೊಂಡು ರಾತ್ರಿ ಹೊರಗೆ ಹೋಗಿದ್ದ



ಇವರಿಬ್ಬರು ರಾಜಾನುಗುಂಟೆ ಕಡೆಯಿಂದ ರೂಂ ಗೆ ಹೋಗುತ್ತಿದ್ದಾಗ ಇಂದು ಬೆಳಗಿನ ಜಾವ 4 ಗಂಟೆ ಸುಮಾರಿನಲ್ಲಿ ಕಾಕೋಳು ರಸ್ತೆಯ ಇಟ್ಟಲ್‌ಪುರ ಗೇಟ್ ಸಮೀಪ ಬೈಕ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ಅಂಗಡಿಗೆ ಡಿಕ್ಕಿ ಹೊಡೆದು ನಂತರ ಕಾಂಪೌಂಡ್ ಗೋಡೆಗೆ ಅಪ್ಪಳಿಸಿ ಬಿದ್ದಿದೆ.

ಪರಿಣಾಮ ಇವ–ರಿಬ್ಬರು ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆ.ಸುದ್ದಿ ತಿಳಿದು ಯಲಹಂಕ ಸಂಚಾರಿ ಠಾಣೆ ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿ ಇಬ್ಬರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದು, ಅತೀ ವೇಗದ ಚಾಲನೆಯಿಂದಾಗಿ ಈ ಅಪಘಾತ ಸಂಭವಿಸಿದೆ ಎಂಬುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

## ಸಿದ್ದರಾಮಯ್ಯ ಮೂರ್ತಿ ತೆರವು ಖಂಡಿಸಿ ಮೂರನೇ ದಿನವೂ ಧರಣಿ

ಅ.ಶ. ಸುದ್ದಿ ಕಲಬುರಗಿ

**ಕಲಬುರಗಿ: ನಗರದ ಪ್ರಮುಖ ಸ್ಥಳದಲ್ಲಿ ಸ್ಥಾಪಿಸಲಾಗಿದ್ದ ಸಿದ್ದರಾಮಯ್ಯ ಅವರ ಮೂರ್ತಿಯನ್ನು ಮಹಾನಗರ ಪಾಲಿಕೆ ಹಾಗೂ ಜಿಲ್ಲಾಡಳಿತದ ಅಧಿಕಾ–ರಿಗಳು ತೆರವುಗೊಳಿಸಿರುವ ಕ್ರಮವನ್ನು ಖಂಡಿಸಿ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ನಡೆಸುತ್ತಿರುವ ಧರಣಿ ಸತ್ಯಾಗ್ರಹ ಮೂರನೇ ದಿನವೂ ಮುಂದುವರಿಯಿತು.**

ಮೂರ್ತಿ ತೆರವುಗೊಳಿಸಿರುವ ಕ್ರಮವನ್ನು ಖಂಡಿಸಿದ ಪ್ರತಿಭಟನಾಕಾರರು, ಅಧಿಕಾರಿಗಳು ಕೂಡಲೇ ಈ ಕು–ರಿತು ಸ್ಪಷ್ಟನೆ ನೀಡಬೇಕು ಹಾಗೂ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಧರಣಿ ಸ್ಥಳದಲ್ಲಿ ಮಾತನಾಡಿದ ಮುಖಂಡರು, ಸಾರ್ವಜನಿಕರ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಆಡಳಿತವು ಕ್ರಮ



ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಧರಣಿಯಲ್ಲಿ ರವಿ ಸಿರಿಸಾಗಿ, ಕೋಮರಾಮ್ ಭೀಮ್ ಗೊಂಡ ಕುರುಬ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಮದ್ರಿಕಿ, ಬಾಲಾಜಿ ಜಬಡೇ, ಪರಮೇಶ್ ಅಲಗುಡ್, ರಾಷ್ಟ್ರೀಯ ಸಂಗೊಳ್ಳಿ ರಾಯಣ್ಣ ಸೇನೆಯ ಕಲಬುರಗಿ ಜಿಲ್ಲಾಧ್ಯಕ್ಷ ಭಾಗೇಶ್ ಮರತೂರ್, ಸಿದ್ದು ಪೂಜಾರಿ, ಬಾಲಾಜಿ ಘೋಡಕೆ, ರಾಜು ನಾಗೂರ್, ಷಣ್ಮುಖ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಮೂರ್ತಿ ತೆರವು ವಿಚಾರದಲ್ಲಿ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಅಧಿಕಾ–ರಿಗಳು ಸೂಕ್ತ ನಿರ್ಧಾರ ಕೈಗೊಳ್ಳುವವರೆಗೆ ಧರಣಿ ಮುಂದುವರಿಸುವುದಾಗಿ ಪ್ರತಿಭಟನಾಕಾರರು ತಿಳಿಸಿದರು.

## ಆಡಳಿತವನ್ನು ಜನರ ಬಳಿಗೆ ಕೊಂಡೊಯ್ಯುವುದೇ ಪ್ರಜಾ ಸೇವೆಯ ಉದ್ದೇಶ :ತಹಶೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ ತಾಲೂಕಿನ: ನವಲಿ ಹೋಬಳಿಯಲ್ಲಿ ಪ್ರಜಾ ಸೇವಾ ಆಂದೋಲನ ಸಾರ್ವಜನಿಕರ ಕುಂದುಕೊರತೆಗಳನ್ನು ಸ್ಥಳದಲ್ಲೇ ಪರಿಹರಿಸಲು ಮತ್ತು ಆಡಳಿತವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುವ ಉದ್ದೇಶದಿಂದ ಈ ಪ್ರಜಾ ಸೇವೆ ಅಭಿಯಾನ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ತಹಶೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿ ಅವರು ಹೇಳಿದರು.**

ತಾಲೂಕಿನ ನವಲಿಯ ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ನವಲಿ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. “ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ” ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಪ್ರಜಾಸೇವೆ ಆಂದೋಲನವು ಸಾರ್ವಜನಿಕರ ಸಮಸ್ಯೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ತ್ವರಿತ ಪರಿಹಾರ ಒದಗಿಸುವ ಮಹತ್ವದ ವೇದಿಕೆಯಾಗಿದೆ. ನವಲಿ ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯಿತಿಗಳ ಸಾರ್ವಜನಿಕರು ತಮ್ಮ ಸಮಸ್ಯೆಗಳು ಹಾಗೂ ಕುಂದುಕೊರತೆಗಳ ಕುರಿತು ಅರ್ಜಿ ಸಲ್ಲಿಸಿದಲ್ಲಿ, ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನಂತರ ಕಾರ್ಯಕ್ರಮದ ಕುರಿತು ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ರಾಜಶೇಖರ್ ಅವರು ಮಾತನಾಡಿ, ಸರ್ಕಾರ ಜಾರಿಗೆ ತಂದಿರುವ ಪ್ರಜಾಸೇವೆ ಆಂದೋಲನವನ್ನು ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು



ಹಾಗೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು. 6ಆಂದೋಲನದಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಐಪಿಜಿಆರ್‌ಎಸ್ (IPGRS) ಪೋರ್ಟಲ್‌ನಲ್ಲಿ ದಾಖಲಿಸಿ ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಲಾಗುತ್ತದೆ.

ಸ್ಥಳದಲ್ಲಿಯೇ ಪರಿಹರಿಸಬಹುದಾದ ಅರ್ಜಿಗಳಿಗೆ ತಕ್ಷಣ ಪರಿಹಾರ ಒದಗಿಸಲಾಗುತ್ತದೆ. ಸ್ಥಳದಲ್ಲಿಯೇ ಪರಿಹರಿಸಲು ಸಾಧ್ಯವಾಗದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು. ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಪದೇಪದೇ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಸರ್ಕಾರದ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುವುದು ಪ್ರಜಾಸೇವೆ ಆಂದೋಲನದ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ೦ಕಒಅ ಕಾರ್ಯದರ್ಶಿ ಸಾವಿತ್ರಿ ಪಾಟೀಲ್, ಅಕಖ ವೀರಣ್ಣ ಹಳ್ಳಿ, ಉಪವಲಯ ಅರಣ್ಯಾಧಿಕಾರಿ ಸುಲೇಮಾನ್, ತಾ.ಪಂ ಸಹಾಯಕ ನಿರ್ದೇಶಕರಾದ ವೀರಣ್ಣ ನಕ್ರಳ್ಳಿ, ನಾಗೇಶ್ ಸೇರಿದಂತೆ ಪೊಲೀಸ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RWS), ಪಂಚಾಯತ್ ರಾಜ್, ಆರೋಗ್ಯ, ಅರಣ್ಯ, ಅಬಕಾರಿ, ತೋಟಗಾ–ರಿಕೆ, ಕೃಷಿ, ರೇಷ್ಮೆ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ, ಹೋಬಳಿಯ ಸಾರ್ವಜನಿಕರು ಭಾಗವಹಿಸಿದ್ದರು.

# ನಶೆ ಮುಕ್ತ ಸಮಾಜ ನಿರ್ಮಾಣಕ್ಕೆ ಹತ್ತು ಕೋಟಿ ಜನರನ್ನು ತಲುಪುವ ಗುರಿ ಹೊಂದಲಾಗಿದೆ: ರಾಜಯೋಗಿನಿ ಸುವರ್ಣ ಅಕ್ಕ ಸಂಕಲ್ಪ

ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ನಶೆ ಮುಕ್ತ ಸಮಾಜ ನಿರ್ಮಾಣದ ಸಂಕಲ್ಪದೊಂದಿಗೆ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯವು ದೇಶದಾದ್ಯಂತ ಹಮ್ಮಿಕೊಂಡಿರುವ ಜಾಗೃತಿ ಅಭಿಯಾನವನ್ನು ಮತ್ತಷ್ಟು ವಿಸ್ತರಿಸುವ ಉದ್ದೇಶ ಹೊಂದಿದ್ದು, ಹತ್ತು ಕೋಟಿ ಜನರನ್ನು ತಲುಪುವ ಗುರಿಯನ್ನು ಹೊಂದಲಾಗಿದೆ ಎಂದು ರಾಜಯೋಗಿನಿ ಬ್ರಹ್ಮಕುಮಾರಿ ಸುವರ್ಣ ಅಕ್ಕನವರು ಹೇಳಿದರು.**

ನಗರದ ವಿವೇಕ ನಗರದ ಶ್ರೀ ಬಸವೇಶ್ವರ ಗಜಾನನ ತರುಣ ಮಂಡಳಿಯವರು ಉತ್ಸವ ಸಮಿತಿ ಅಂಗವಾಗಿ ಹಮ್ಮಿಕೊಂಡ ನಶೆಮುಕ್ತ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾದಕ ವಸ್ತುಗಳ ವ್ಯಸನವು ವ್ಯಕ್ತಿಯ



ಆರೋಗ್ಯ ಮತ್ತು ಮಾನಸಿಕ ನೆಮ್ಮದಿಯ ಮೇಲೆ ಮಾತ್ರವಲ್ಲದೆ ಕುಟುಂಬ ಹಾಗೂ ಸಮಾಜದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ. ಯುವಜನತೆ ನಶೆಯ ಚಟಕ್ಕೆ ಬಲಿಯಾಗದಂತೆ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಸಾಮಾಜಿಕ ಹೊಣೆಗಾರಿಕೆಯಾಗಿದೆ ಎಂದರು. ರಾಜಯೋಗ, ಧ್ಯಾನ, ಸಕಾರಾತ್ಮಕ ಚಿಂತನೆ ಹಾಗೂ ಉತ್ತಮ ಜೀವನಶೈಲಿಯ ಮೂಲಕ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಮತ್ತು ಮನೋಬಲವನ್ನು ಬೆಳೆಸಬಹುದು. ಯುವಕರಲ್ಲಿ ನೈತಿಕ ಮೌಲ್ಯಗಳು, ಆತ್ಮಶಕ್ತಿ ಮತ್ತು ಆರೋಗ್ಯಕರ ಚಿಂತನೆಗಳನ್ನು ಬೆಳೆಸುವ ಮೂಲಕ ನಶೆ ಮುಕ್ತ ಸಮಾಜ ನಿರ್ಮಿಸಲು ಸಾಧ್ಯ ಎಂದು ಅವರು ತಿಳಿಸಿದರು.

ನಶೆ ಮುಕ್ತ ಅಭಿಯಾನವನ್ನು ಮನೆ, ಶಾಲೆ, ಕಾಲೇಜು ಹಾಗೂ ವಿವಿಧ ಸಾಮಾಜಿಕ ಸಂಸ್ಥೆಗಳ ಮೂಲಕ ಜನಾಂದೋಲನವಾಗಿ ರೂಪಿಸುವ ಅಗತ್ಯವಿದೆ. ಪ್ರತಿಯೊಬ್ಬರೂ ಈ ಅಭಿಯಾನದಲ್ಲಿ ಕೈಜೋಡಿಸಿದಾಗ ಮಾತ್ರ ಆರೋಗ್ಯವಂತ, ಸದೃಢ ಮತ್ತು ನಶೆ ಮುಕ್ತ ಸಮಾಜ ನಿರ್ಮಾಣ ಸಾಧ್ಯ ಎಂದು ಬ್ರಹ್ಮಕುಮಾರಿ ಸುವರ್ಣ ಅಕ್ಕನವರು ಹೇಳಿದರು. ಈ ಸಂದರ್ಭದಲ್ಲಿ ನೆರೆದ ಜನತೆಗೆ ನಶಾ ಮುಕ್ತ ಸಂಕಲ್ಪ ಪ್ರತಿಜ್ಞಾವಿಧಿ ಬೋಧಿಸಿದರು. ಕಾರ್ಯಕ್ರಮದಲ್ಲಿ ಗಜಾನನ ಸಮಿತಿಯ ಅಧ್ಯಕ್ಷ ನಿತಿನ್ ಪಾಟೀಲ, ಸ್ವರೂಪ್ ಕಪಾಲಿ, ಆದಿತ್ಯ ಬಿರಾದಾರ, ಸಿದ್ದರಾಮ ನಾಗಣಸೂರ, ಹರೀಶ ಬಿರಾದಾರ, ವಕೀಲ ವಿ.ಎಸ್.ಖಾಡೆ, ಸೇರಿದಂತೆ ವಿವಿಧ ಕ್ಷೇತ್ರಗಳ ಗಣ್ಯರು, ಯುವಕರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಬೆಳಗಾವಿ : ತಂದೆ-ಮಗಳ ಹತ್ಯೆಪ್ರಕರಣದಲ್ಲಿ ಮೂವರು ಬಂಧನ

ಅ.ಶ. ಸುದ್ದಿ ಬೆಳಗಾವಿ

**ಬೆಳಗಾವಿ: ಗ್ರಾಮ ಪಂಚಾಯ್ತಿಗೆ ನುಗ್ಗಿ ಮಾಜಿ ಯೋಧ ಹಾಗೂ ಅವರ ಪುತ್ರಿಯನ್ನು ಬರ್ಬರವಾಗಿ ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಕೊಲೆಯಾದ ರುದ್ರಪ್ಪನ ಸಹೋದರ ಬಸಪ್ಪ ಕುಂದರಗಿ, ಸಂಗಪ್ಪ ಕುಂದರಗಿ,ಅವರಪುತ್ರಮಡಿವಾಳಪ್ಪಕುಂದರಗಿಬಂಧಿತಆರೋಪಿಗಳು.**





ಕಿತ್ತೂರು ತಾಲೂಕಿನ ಅವರಾದಿಯಲ್ಲಿ ಮಾಜಿ ಯೋಧ ರುದ್ರಪ್ಪ ಕುಂದರಗಿ (67) ಹಾಗೂ ಅವರ ಪುತ್ರಿ ಶಶಿಕಲಾ ಕುಂದರಗಿ (26) ಅವರನ್ನು ದಾಯಾದಿಗಳೇ ಕೊಚ್ಚಿ ಕೊಂದಿದ್ದರು. ಆಸ್ತಿ ಪಾಲು ವಿಚಾರವಾಗಿ ಸಹೋದರರ ನಡುವೆ ಕಲಹ ಏರ್ಪಟಿತ್ತು. 38 ಗುಂಟೆ ಜಮೀನನ್ನು ಮೂವರು ಸಹೋದರರಿಗೆ ಹಂಚಿಕೆ ಮಾಡುವಂತೆ ನ್ಯಾಯಾಲಯ ಆದೇಶಿಸಿತ್ತು. ಆದರೆ ರುದ್ರಪ್ಪ ಅವರು ತಮ ಪಾಲಿಗೆ ಬಂದ ಜಮೀನನ್ನು ಈಗಾಗಲೇ ಮಾರಾಟ ಮಾಡಿದ್ದರೂ, ಉಳಿದ ಜಮೀನಿನಲ್ಲೂ ಪಾಲು ನೀಡಬೇಕೆಂದು ಒತ್ತಾಯಿಸುತ್ತಿದ್ದರು ಎನ್ನಲಾಗಿದೆ. ಈ ಸಂಬಂಧ ಮತ್ತೊಬ್ಬ ಸಹೋದರ ಆಸ್ತಿ ಪಾಲುದಾರಿಕೆ ಅರ್ಜಿ ಸಲ್ಲಿಸಲು ಅವರಾದಿ ಗ್ರಾಮ ಪಂಚಾಯ್ತಿಗೆ ಬಂದಿದ್ದ ವೇಳೆ ಆರೋಪಿಗಳು ಅಲ್ಲಿಗೆ ನುಗ್ಗಿ ರುದ್ರಪ್ಪ ಹಾಗೂ ಶಶಿಕಲಾ ಮೇಲೆ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಾಳಿಯಲ್ಲಿ ಇಬ್ಬರೂ ಮೃತಪಟ್ಟಿದ್ದು, ರುದ್ರಪ್ಪ ಅವರ ಕಾರು ಚಾಲಕ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಕೊಪ್ಪಳ– 2500 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ದೇಶದಲ್ಲಿ ಆಟೋಮೋಬೈಲ್ ಇಂಡಸ್ಟ್ರಿ ಬೆಳವಣಿಗೆ ಮತ್ತು ದೇಶದ ಆರ್ಥಿಕತೆ ಸಬಲೀಕರಣಕ್ಕೆ ಶ್ರೀರಾಮ್ ಫೈನಾನ್ಸ್ ಕಂಪನಿ ಅಪಾರ ಕೊಡಿಗೆ ನೀಡಿದೆ. ಅದರ ಜೊತೆಗೆ ಇಂದು ಕೊಪ್ಪಳದಲ್ಲಿ 2500 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿರುವ ಇವರ ಸೇವೆ ಶ್ಲಾಘನೀಯ ಎಂದು ಸಂಸದ ರಾಜಶೇಖರ್ ಹಿಟ್ನಾಳ ಮಾತನಾಡಿದರು ಅವರು ಕೊಪ್ಪಳ ನಗರದ ಮಧುಶ್ರೀ ಗಾರ್ಡನ್ ನಲ್ಲಿ ಶ್ರೀರಾಮ್ ಕಂಪನಿ ಪ್ರಾಯೋಜಕತ್ವದಲ್ಲಿ ಜರುಗಿದ ಶ್ರೀ ರಾಮ್ ಸೇವಾ ಸಂಕಲ್ಪ ದ ವಿದ್ಯಾರ್ಥಿ ಪ್ರೋತ್ಸಾಹ ಧನ ವಿತರಣಾ ಸಮಾರಂಭವನ್ನು ಉದ್ಘಾಟನೆ ಮಾಡಿ ಮಾತನಾಡಿದರು.**

ಶ್ರೀ ರಾಮ್ ಫೈನಾನ್ಸ್ ಲಿಮಿಟೆಡ್ ಕಂಪನಿಯ ಮಾನ್ಯ ಎಕ್ಸಿಕ್ಯೂಟಿವ್ ಡೈರೆಕ್ಟರ್ ಶ್ರೀಧರ್ ಮಠ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸಾಮಾನ್ಯ ಚಾಲಕರು, ಕ್ಲೀನರ್‌ಗಳು ಗಳು ಸೇರಿದಂತೆ ಸಮಾಜದ ಕಟ್ಟಕಡೆಯ




ವ್ಯಕ್ತಿಯೂ ಸಹ ಕಮರ್ಷಿಯಲ್ ಟ್ರಕ್ ಮಾಲೀಕರಾಗಬೇಕು ಎನ್ನುವ ಉದ್ದೇಶದಿಂದ ಗೌರವಾನ್ವಿತ ಶ್ರೀ ಆರ್. ತ್ಯಾಗರಾಜನ್ ರವರು ಸ್ಥಾಪನೆ ಮಾಡಿದ ಶ್ರೀರಾಮ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಎಂಬ ಕಂಪನಿ ಇಂದು ದೇಶದ ಆರ್ಥಿಕ ಸಬಲೀಕರಣಕ್ಕೆ ತನ್ನದೇ ಆದ ಕೊಡುಗೆ ನೀಡಿದೆ ಎಂದುಕಂಪನಿ ಪರಿಚಯ ಹೇಳಿದರು. ಅವರು ಶ್ರೀ ರಾಮ್ ಕಂಪನಿ 3225 ಶಾಖೆಗಳ ನೆಟ್‌ವರ್ಕ್ ಹೊಂದಿದ್ದು, 831 ಗ್ರಾಮೀಣ ಕೇಂದ್ರಗಳನ್ನು ಹೊಂದಿದ್ದು ಹಾಗೂ ಭಾರತಾದ್ಯಂತ 50 ಪ್ರಾದೇಶಿಕ ಕಚೇರಿಗಳನ್ನು ಹೊಂದಿದ್ದು ಹಾಗೂ 28 ರಾಜ್ಯಗಳಲ್ಲಿ ಹಾಗೂ 8 ಕೇಂದ್ರಾಡಳಿತ ಪ್ರದೇಶಗಳಲ್ಲಿ ಸುಮಾರು 10.03 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. 79,000 ಉದ್ಯೋಗಿಗಳ ಕುಟುಂಬಕ್ಕೆ ಉದ್ಯೋಗ ನೀಡಿದೆ.

ರೂ.3.02/- ಲಕ್ಷ ಕೋಟಿ ವಹಿವಾಟು ಮಾಡುತ್ತ ಇಡೀ ಭಾರತದಲ್ಲಿ ಪ್ರಮುಖ ಹಣಕಾಸು ಸಂಸ್ಥೆಯಾದ ಶ್ರೀರಾಮ್ ಫೈನಾನ್ಸ್ ಕಂಪನಿ ಇಂದು ಚಾಲಕರ ಮಕ್ಕಳಿಗೆ ಈರೀತಿ ಪ್ರತಿ ವರ್ಷ ದೇಶಾದ್ಯಂತ 30 ಸಾವಿರಕ್ಕೂ ಅಧಿಕ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುತ್ತಿದೆ ಎಂದರು. ಕಾರ್ಯಕ್ರಮದ ಸಾನಿಧ್ಯವನ್ನು ಪೂಜ್ಯ ಶ್ರೀ ಶಿವಶಾಂತವೀರ ಮಹಾಸ್ವಾಮಿಗಳು ಬಿಸರಳ್ಳಿ ಗವಿಸಿದ್ದೇಶ್ವರ ಶಾಖಾಮಠ, ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ ಎಸ್ ದರಗದ , ಶಾಸಕ ರಾಘವೇಂದ್ರ ಹಿಟ್ನಾಳ್, ಮಾಜಿ ಸಂಸದ ಸಂಗಣ್ಣ ಕರಡಿ, ಶ್ರೀನಿವಾಸ್ ಗುಪ್ತ, ರಾಜ್ಯ ಪ್ರಶಸ್ತಿ ಪುರಸ್ಕೃತೆ ಹುಚ್ಚಮ್ಮ ಚೌದರಿ, ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ, ಶಿಕ್ಷಣಾಧಿಕಾರಿ ಶೇಖರ್ ಹೊರಪೇಟೆ, ಹೆಚ್ಚುವರಿ ಜಿಲ್ಲಾ ಪೊಲೀಸ್ ಮಹಾ ವರಿಷ್ಟಧಿಕಾರಿ ಹೇಮಂತ್ ಕುಮಾರ್ , ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಪ್ರಕಾಶ್ ಆನಂದಹಳ್ಳಿ, ಶ್ರೀ ರಾಮ್ ಕಂಪನಿಯ ಶ್ರೀ ಚನ್ನನ ಗೌಡ ಪ್ರಹ್ಲಾದ್ ಕುಲಕರ್ಣಿ ರಾಘವೇಂದ್ರ, ಟಿ ಆರ್,ರಾಘವೇಂದ್ರ ಶೆಟ್ಟಿ, ಮಂಜುನಾಥ ಸಿಂಧೋಗಿ, ಮಂಜುನಾಥ ಕೊಪ್ಪಳ ಸೇರಿದಂತೆ ಹಲವರು ಇದ್ದರು.

# ಗಣೇಶ ಪ್ರತಿಷ್ಠಾಪನೆ ನಿಮಿತ್ತ ಅದ್ದೂರಿ ಅನ್ನಸಂತರ್ಪಣೆ

ಅ.ಶ. ಸುದ್ದಿ ಕನಕಗಿರಿ

**ಕನಕಗಿರಿ: ಪಟ್ಟಣದ ಶನಿವಾರದಂದು13ನೇ ವಾರ್ಡಿನ ಬಳಗಾರ ಓಣಿಯಲ್ಲಿ ಕನಕಗಿರಿ ಕಾ ಮಹಾರಾಜ್ ಗಣೇಶ ಪ್ರತಿಷ್ಠಾಪನೆ ನಿಮಿತ್ತ ಭಕ್ತಿಭಾವದಿಂದ ಸಾರ್ವಜನಿಕರಿಗೆ ಹಾಗೂ ಭಕ್ತರಿಗೆ ಸಿಹಿ ಉದುರಹುಗ್ಗಿ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗಣೇಶ ಮೂರ್ತಿಗೆ ವಿಶೇಷ ಪೂಜೆ, ಅರ್ಚನೆ ಹಾಗೂ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದ ಬಳಿಕ ಭಕ್ತರಿಗೆ ಪ್ರಸಾದ ವಿತರಿಸಲಾಯಿತು.**



ನಂತರ ನಡೆದ ಅನ್ನಸಂತರ್ಪಣೆಯಲ್ಲಿ 13ನೇ ವಾರ್ಡಿನ ಬಳಗಾರು ಓಣಿ ನಿವಾಸಿಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಪ್ರದೇಶಗಳಿಂದ ಆಗಮಿಸಿದ್ದ ನೂರಾರು ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು. ಗಣೇಶೋತ್ಸವದ ಅಂಗವಾಗಿ ಆಯೋಜಿಸಿದ್ದ ಅನ್ನಸಂತರ್ಪಣೆ ಕಾರ್ಯಕ್ರಮವು ಭಕ್ತಿ ಮತ್ತು ಸೌಹಾರ್ದತೆಯ ವಾತಾವರಣದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಮಕ್ಕಳು, ಮಹಿಳೆಯರು, ಯುವಕರು ಹಾಗೂ ಹಿರಿಯರು ಸೇರಿದಂತೆ ಎಲ್ಲ ವರ್ಗದ ಜನರು ಭಾಗವಹಿಸಿದ್ದರು.

ಗಣೇಶೋತ್ಸವದ ಮೂಲಕ ಸಮಾಜದಲ್ಲಿ ಭಕ್ತಿ, ಒಗ್ಗಟ್ಟು, ಸಹೋದರತ್ವ ಹಾಗೂ ಪರಸ್ಪರ ಸೌಹಾರ್ದತೆ ಬೆಳೆಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಕಮಿಟಿಯ ಆಯೋಜಕರು ತಿಳಿಸಿದರು. ಕಾರ್ಯಕ್ರಮದ ಯಶಸ್ಸಿಗೆ ವಾರ್ಡಿನ ನಿವಾಸಿಗಳು ಹಾಗೂ ಭಕ್ತರು ಸಹಕಾರ ನೀಡಿದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## 'ವಚನಾಮೃತ'

ಬಂಜೆ ಬಂಜೆ ಎಂದು ನಂಜೆರಿಸಿ
ಚುಚ್ಚೊ ಮೂಳರಿಗೆ ನಿತ್ಯ ಮೃಷ್ಟಾನ್ನವೇ
ಬಡಿಸಿ ಕಳಿಸಬೇಕಯ್ಯ ಬಾಡಿಗೆ
ಮನೆಯೊಳ್ ಬಂಧಿ ನಾವೆಲ್ಲ ಎಂಬ-
ರಿಯದ ಮಂದಿಯೊಳ್ ನನ್ನಗೇನಿದೆ
ಕಜ್ಜ ಸತ್ಯವಾಣಿ!!.



ವಾಣಿ ಭಂಡಾರಿ.

# ಶ್ರೀ ಮಹಾಮಾಯ ಜಾತ್ರೆಗೆ ಸಜ್ಜು: ರಥದ ಮನೆಯಿಂದ ಮಹಾಮಾಯ ರಥ ಹೊರಕ್ಕೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಮಹಾಶಕ್ತಿ ಆದಿದೇವತೆ ಶ್ರೀ ಮಹಾಮಾಯ ದೇವಿಯ ಜಾತ್ರಾ ಮಹೋತ್ಸವದ ಸಿದ್ಧತೆಗಳು ಆರಂಭಗೊಂಡಿದ್ದು, ಜಾತ್ರೆಯ ಪ್ರಮುಖ ಆಕರ್ಷಣೆಯಾದ ಶ್ರೀ ಮಹಾಮಾಯ ರಥವನ್ನು ಶನಿವಾರ ಪೂಜಾ ವಿಧಿ-ವಿಧಾನಗಳೊಂದಿಗೆ ರಥದ ಮನೆಯಿಂದ ಹೊರಗೆ ತರಲಾಯಿತು.**

ಸೆಪ್ಟೆಂಬರ್ 19ರ ಶನಿವಾರ ಅಷ್ಟಮಿ ತಿಥಿಯ ಪ್ರಯುಕ್ತ ಶ್ರೀ ಮಹಾಗಣಪತಿ ಪೂಜೆ ಹಾಗೂ ವಿಶ್ವಕರ್ಮ ಪೂಜಾ ವಿಧಿ-ವಿಧಾನಗಳನ್ನು ನೆರವೇರಿಸಿ, ಶ್ರೀ ಮಹಾಮಾಯ ರಥವನ್ನು ರಥದ ಮನೆಯಿಂದ ಹೊರತರಲಾಯಿತು. ಈ ಕುರಿತು ದೇವಸ್ಥಾನದ ಧರ್ಮಾಧಿಕಾರಿ ನಾಗರಾಜ ದೇಸಾಯಿ ಮಾತನಾಡಿ, ಶ್ರೀ ಮಹಾಮಾಯ ಜಾತ್ರಾ ಮಹೋತ್ಸವಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ರಥೋತ್ಸವದ



ಹಿನ್ನೆಲೆಯಲ್ಲಿ ರಥವನ್ನು ಹೊರತೆಗೆದು, ರಥವನ್ನು ಸಿದ್ಧಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ಅಕ್ಟೋಬರ್ 11ರ ಭಾನುವಾರದಿಂದ ನವರಾತ್ರಿ ಪೂಜೆ ಆರಂಭವಾಗಲಿದ್ದು, ಅಕ್ಟೋಬರ್ 19ರ ಸೋಮವಾರ ಶ್ರೀ ಮಹಾಮಾಯ ರಥೋತ್ಸವ ನೆರವೇರಲಿದೆ. ಅಕ್ಟೋಬರ್ 20ರಂದು ವಿಜಯದಶಮಿ ಆಚರಣೆ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಭಕ್ತರಿಗೆ ಆಹ್ವಾನ

ಶ್ರೀ ಮಹಾಮಾಯ ರಥೋತ್ಸವವು ಅಕ್ಟೋಬರ್ 19ರ ಸೋಮವಾರದಂದು ನಡೆಯಲಿದ್ದು,

ನಾಡಿನ ಸಮಸ್ತ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಮಹಾಮಾಯ ದೇವಿಯ ದರ್ಶನ ಪಡೆದು ದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ದೇವಸ್ಥಾನದ ಧರ್ಮಾಧಿಕಾರಿ ನಾಗರಾಜ ದೇಸಾಯಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಧರ್ಮಾಧಿಕಾರಿಗಳು, ಅರ್ಚಕರು, ಬೋವಿ ವಡ್ಡರ್ ಸಮಾಜದ ದೇವಸ್ಥಾನದ ಸೇವಕರು, ವಿವಿಧ ಸಮಾಜಗಳ ಗುರು-ಹಿರಿಯರು, ಮುಖಂಡರು, ಯುವಕರು, ಮಹಿಳೆಯರು ಸೇರಿದಂತೆ ಭಕ್ತರು ಉಪಸ್ಥಿತರಿದ್ದರು.

# ಕುಕನೂರು ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಸಭೆ

ಅ.ಶ. ಸುದ್ದಿ ಕುಕನೂರು

**ಕೊಪ್ಪಳ: ಕುಕನೂರು ಪಟ್ಟಣದ ಮತ್ತು ಹೋಬಳಿಯ ಎಲ್ಲಾ ಗ್ರಾಮಗಳ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸುವ ಹೊಣೆಗಾರಿಕೆ ಎಲ್ಲ ಇಲಾಖೆಗಳ ಮೇಲಿದೆ ಎಂದು ಕುಕನೂರು ತಹಶಿಲ್ದಾರರಾದ ಬಸವರಾಜ ಬೆಣ್ಣಿಶೀರೂರ ಅವರು ಹೇಳಿದರು. ಪ್ರಜಾಸೇವಾ ಇಲಾಖೆ ಹಾಗೂ ಕುಕನೂರು ತಾಲ್ಲೂಕು ಆಡಳಿತದ ಸಹಯೋಗದಲ್ಲಿ ಕುಕನೂರಿನ ವಿದ್ಯಾನಂದ ಕಾಲೇಜು ಆವರಣದಲ್ಲಿ ಶನಿವಾರ (ಸೆ. 19ರಂದು) ಹಮ್ಮಿಕೊಂಡಿದ್ದ ಹೊಬಳಿ ಮಟ್ಟದ ಪ್ರಜಾಸೇವಾ ಆಂದೋಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.**

ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಪ್ರಜಾಸೇವೆ ಆಂದೋಲನವು




ಸಾರ್ವಜನಿಕರ ಸಮಸ್ಯೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ತ್ವರಿತ ಪರಿಹಾರ ಒದಗಿಸುವ ಮಹತ್ವದ ವೇದಿಕೆಯಾಗಿದೆ. ಕುಕನೂರು ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯಿತಿಗಳ ಸಾರ್ವಜನಿಕರು ತಮ್ಮ ಸಮಸ್ಯೆಗಳು ಹಾಗೂ ಕುಂದುಕೊರತೆಗಳ ಕುರಿತು ಸಲ್ಲಿಸಿದ ಅರ್ಜಿಗಳಿಗೆ ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಕುಕನೂರು ತಾ.ಪಂ ಇಓ ಬೆಟದಪ್ಪ ಮಾಳೆಕೊಪ್ಪ ಅವರು ಮಾತನಾಡಿ, ಸರ್ಕಾರ ಜಾರಿಗೆ ತಂದಿರುವ ಪ್ರಜಾಸೇವೆ ಆಂದೋಲನವನ್ನು ತಾಲೂಕು,

ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಹಾಗೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು. ಈ ಆಂದೋಲನದಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಐಪಿಜಿಆರ್‌ಎಸ್ ಪೋರ್ಟಲ್‌ನಲ್ಲಿ ದಾಖಲಿಸಿ ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಲಾಗುತ್ತದೆ. ಸ್ಥಳದಲ್ಲಿಯೇ ಪರಿಹರಿಸಬಹುದಾದ ಅರ್ಜಿಗಳಿಗೆ ತಕ್ಷಣ ಪರಿಹಾರ ಒದಗಿಸಲಾಗುತ್ತದೆ. ಸ್ಥಳದಲ್ಲಿಯೇ ಪರಿಹರಿಸಲು ಸಾಧ್ಯವಾಗದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಪೊಲೀಸ್ ಇಲಾಖೆ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಲೇಖಕರ ದಿನಚರಿ...

## ಅನಂತನಾಗ್ ಮುಕುಟಕ್ಕೆ ದಾದಾಸಾಹೇಬ್ ಫಾಲ್ಕೆ ಗರಿ



ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಮೂಲೆಯೊಂದರ ಮಠದಲ್ಲಿ ಅತ್ಯಂತ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಆ ಹುಡುಗ ಮುಂಬೈ ಸೇರಿ ಮರಾಠಿ ನಾಟಕ ರಂಗದಲ್ಲಿ ಮೆರೆದು ಮುಂದೆ ಕನ್ನಡ ಚಿತ್ರರಂಗದ ಅತ್ಯಂತ ಪ್ರಭಾವಿ ನಟ-ರಲ್ಲಿ ಒಬ್ಬನಾದ. ಸ್ಪುರದ್ರೂಪಿ,ಗಂಭೀರ ಸ್ವಭಾವದ ಸಾಫ್ಟ್ ಕ್ಯಾರೆಕ್ಟರ್ಗಳಿಗೆ ಹೆಸರಾದ ಅಭಿಜಾತ ಕಲಾವಿದ, ಮುಂದೆ ತರಲೆ ಪಾತ್ರಗಳನ್ನು ಕೂಡ ಲೀಲಾಜಾಲವಾಗಿ ಅಭಿನಯಿಸಿದ್ದರು.

70-80ರ ದಶಕದ ಚಲನಚಿತ್ರ ರಂಗದ ಅತ್ಯಂತ ಜನಪ್ರಿಯ, ಆದ-ರೆ ಅಷ್ಟೇ ಸೌಜನ್ಯಶೀಲ ನಟರಲ್ಲಿ ಒಬ್ಬರಾಗಿದ್ದು ಆತನ ಹೆಗ್ಗಳಿಕೆ. ಅವರ ಚಲನಚಿತ್ರಗಳನ್ನು ನೋಡಲೆಂದೇ ಒಂದು ಬೃಹತ್ ಮಹಿಳಾ ಪ್ರೇಕ್ಷಕ ಗಣವನ್ನು ಹೊಂದಿದವರು, ದಕ್ಷಿಣ ಭಾರತದ ಬಹುತೇಕ ದಿಗ್ಗಜ ನಟರಾದ ಕಮಲ್ ಹಾಸನ್, ಮಮ್ಮೂಟಿ, ರಜನಿಕಾಂತ್ ಅವರಿಂದ ವಿಶ್ವ ಮಾನ್ಯ, ಕ್ಲಾಸ್ ನಟನೆಂದು ಕರೆಯಲ್ಪಟ್ಟವರು. ಅವರೇ ಚಿತ್ರರಂಗದಲ್ಲಿ ಸುಮಾರು ಐದು ದಶಕಗಳನ್ನು ಕಳೆದ ನಮ್ಮೆಲ್ಲರ ಪ್ರೀತಿಯ ನಟ ಅನಂತನಾಗ್. ಅಭಿಜಾತ ನಟನೆಗೆ, ಉತ್ತಮ ಪಾತ್ರ ನಿರ್ವಹಣೆಗೆ ಅವರಿಗೆ ಅವರೇ ಸಾಟಿ ಎಂಬಂತಹ ವ್ಯಕ್ತಿ ಅನಂತನಾಗ್. ಕನ್ನಡ ಅಲ್ಲದೇ ಬಹುಭಾಷಾ ನಟರಾಗಿ ಗುರುತಿಸಿಕೊಂಡವರು ಅನಂತನಾಗ್.

ಅನಂತ್ ನಾಗ್ ಅವರ ಮೂಲ ಹೆಸರು ಅನಂತ ನಾಗರಕಟ್ಟೆ. ಹುಟ್ಟಿದ್ದು ಭಟ್ಕಳ ತಾಲೂಕಿನ ಶಿರಾಲಿಯಲ್ಲಿ 1948ರ ಸೆಪ್ಟೆಂಬರ್ 4ರಂದು. ತಂದೆ ಸದಾನಂದ ಮತ್ತು ತಾಯಿ ಆನಂದಿ. ಸಾಂಪ್ರದಾಯಿಕ ಕೊಂಕಣಿ ಮಾತನಾಡುವ ಕುಟುಂಬದಲ್ಲಿ ಹುಟ್ಟಿದ ಅನಂತನಾಗ್ ಅವರ ಒಡಹುಟ್ಟಿದವರು ಅಕ್ಕ ಶಾಮಲಾ ಮತ್ತು ತಮ್ಮ ಶಂಕರ್ ನಾಗ್. ತಮ್ಮ ಪ್ರಾರಂಭಿಕ ಶಿಕ್ಷಣವನ್ನು ಅಜ್ಜರಕಾಡಿನಲ್ಲಿರುವ ಕ್ಯಾಥೋಲಿಕ್ ಶಾಲೆಯಲ್ಲಿ ಪಡೆದ ಅವರು ಮುಂದೆ ದಕ್ಷಿಣ ಕನ್ನಡದ ಆನಂದಾಶ್ರಮ ಮತ್ತು ಉತ್ತರ ಕನ್ನಡದ ಚಿತ್ತಾಪುರ ಮಠಗಳಲ್ಲಿ ಶಿಕ್ಷಣವನ್ನು ಪಡೆದರು. ಮುಂದೆ ಒಂಬತ್ತನೇ ತರಗತಿಗೆ ಅವರು ಮುಂಬೈಯ ಶಾಲೆಯೊಂದರಲ್ಲಿ ಸೇರಿಕೊಂಡರು.ಅಲ್ಲಿ ಶಾಲೆಯ ಪಠ್ಯ ಅರ್ಥವಾಗದೆ ಹೋದಾಗ, ಶಾಲೆಗೆ ತುಸು ಹತ್ತಿರದಲ್ಲಿಯೇ ಇದ್ದ ನಾಟಕ ರಂಗಭೂಮಿಯ ಪರಿಚಯ ಇವರಿಗಾಯಿತು.

ರಂಗಭೂಮಿಯಿಂದ ಆಕರ್ಷಿತಗೊಂಡ ಅನಂತನಾಗ್ ಮುಂದೆ ಕೊಂಕಣಿ, ಕನ್ನಡ, ಹಿಂದಿ ಮತ್ತು ಮರಾಠಿ ಭಾಷೆಗಳ ನಾಟಕಗಳಲ್ಲಿ ಅಭಿನಯಿಸಲು ಆಯ್ಕೆಯಾದರು. ದಿಗ್ಗಜ ನಾಟಕಕಾರರಾದ ಅಮೋಲ್ ಪಾಲೇಕರ್, ಸತ್ಯದೇವ ದುಬೆ ಮತ್ತು ಗಿರೀಶ್ ಕಾರ್ನಾಡ್ ಅವರೊಂದಿಗೆ ಸುಮಾರು ಐದು ವರ್ಷಗಳ ಕಾಲ ಇವರು ನಾಟಕಗಳಲ್ಲಿ ಅಭಿನಯಿಸಿದರು.

1973 ರಲ್ಲಿ ಇವರ ಮೊಟ್ಟಮೊದಲ ಕನ್ನಡ ಚಲನಚಿತ್ರ ಸಂಕಲ್ಪ ಬಿಡುಗಡೆಯಾಯಿತು. ಸುಮಾರು ಐದು ವರ್ಷಗಳ ಕಾಲ ಹಿಂದಿ ಚಲನಚಿತ್ರ ರಂಗದಲ್ಲಿ ಶಾಂ ಬೆನಗಲ್ ಅವರ ನಿರ್ದೇಶನದಲ್ಲಿ ಅಂಕುರ್, ನಿಶಾಂತ್, ಮಂಥ-ನ್, ಭೂಮಿಕಾ ಮತ್ತು ಕಲಿಯುಗ್ ಚಿತ್ರಗಳಲ್ಲಿ ಅನಂತ್ ನಟಿಸಿದರು.

ಜಿ.ವಿ. ಅಯ್ಯರ್ ಅವರ ಹಂಸಗೀತೆ ಚಿತ್ರದಲ್ಲಿ ಕರ್ನಾಟಕ ಗಾಯನ ಮಾಡುವ ಶಿಷ್ಯನ ಪಾತ್ರ ವಹಿಸಿದ್ದರು. ಈ ಚಿತ್ರ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗೆ ಆಯ್ಕೆಯಾಗಿತ್ತು. ಅನಂತ್ ನಾಗ್ ಅವರನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿದ್ದು ಅವರ ಸಹೋದರ ಶಂಕರ್ ನಾಗ್ ನಿರ್ದೇಶನದ, ಖ್ಯಾತ ಬರಹಗಾರರಾದ ಆರ್ ಕೆ ನಾರಾಯಣ್ ವಿರಚಿತ ಮಾಲ್ಗುಡಿ ಡೇಸ್ ಧಾರಾವಾಹಿಯ ಮೂಲಕ. ಸುಮಾರು 200ಕ್ಕು ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ ಅನಂತನಾಗ್ ಅವರ ಪಾತ್ರಗಳು ವಿಶಿಷ್ಟವಾಗಿದ್ದವು. ಅವರ ಪಾತ್ರ ಪೋಷಣೆ ಗಟ್ಟಿತನದಿಂದ ಕೂಡಿದ್ದು, ಅವರು ಲೀಲಾ ಜಾಲವಾಗಿ ಅಭಿನಯಿಸುತ್ತಿದ್ದರು.

ದಕ್ಷಿಣ ಭಾರತದ ಪ್ರಮುಖ ನಟಿಯರಾದ ಲಕ್ಷ್ಮಿ, ಗಾಯತ್ರಿ, ಗೀತಾ, ಅಂಬಿಕಾ, ರೂಪದೇವಿ, ಮಾಧವಿ, ಸರಿತಾ ಹೀಗೆ ಎಲ್ಲರೊಂದಿಗೆ ನಟಿಸಿದ್ದಾರೆ ಅನಂತನಾಗ್. ಪ್ರಾರಂಭದಲ್ಲಿ ಗಂಭೀರ ಸಾಫ್ಟ್ ಕ್ಯಾರೆಕ್ಟರ್ ಗಳಲ್ಲಿ ಅಭಿನಯಿಸಿದ ಅವರು ಹಲವಾರು ಚಿತ್ರಗಳಲ್ಲಿ ಪೌರಾಣಿಕ ಪಾತ್ರಗಳಲ್ಲಿ ಕೂಡ ವಿಶೇಷವಾಗಿ ನಾರದನ ಪಾತ್ರಗಳಲ್ಲಿ ಅಭಿನಯಿಸಿದ್ದರು. ಒಂದೊಮ್ಮೆ ಹೆಲಿಕಾಪ್ಟರ್ನಲ್ಲಿ ಪ್ರೇಯಸಿಯನ್ನು ಹುಡುಕಿಕೊಂಡು ಬರುವ, ಮಗದೊಮ್ಮೆ ಪೊಲೀಸ್ ಇನ್ಸ್ಪೆಕ್ಟರ್ ಆಗಿ, ವಕೀಲನಾಗಿ ಹೀಗೆ ಬಹುತೇಕ ಎಲ್ಲ ಪಾತ್ರಗಳಿಗೂ ಅವರು ಬಣ್ಣ ಹಚ್ಚಿದರು. ಭಾರತ ದೇಶ ಕಂಡ ಅದ್ಭುತ ನಟ ಎಂಬ ಹೆಸರಾದ ಅನಂತನಾಗ್ ಮುಂದೆ ಫಣಿ ರಾಮಚಂದ್ರ ಅವರ ನಿರ್ದೇಶನದಲ್ಲಿ ಹಾಸ್ಯ ಚಲನಚಿತ್ರಗಳಲ್ಲಿ ನಟಿಸಿದರು.

ಇದುವರೆಗೂ ಗಂಭೀರ ಪಾತ್ರಗಳಲ್ಲಿ ನೋಡಿದ ಜನ ಅನಂತನಾಗ ಅವರ ಅಭಿನಯದ ಮತ್ತೊಂದು ಅದ್ಭುತ ಮಗ್ಗುಲನ್ನು ನೋಡಿದರು. ಕನ್ನಡ ಚಲನಚಿತ್ರ ರಂಗದ ಬಹುತೇಕ ದಿಗ್ಗಜ ನಟರೊಂದಿಗೆ ಸಹ ನಟರಾಗಿ ಗುರುತಿಸಿಕೊಂಡ ಅನಂತನಾಗ್ ಅಂದಿನಿಂದ ಇಂದಿನವರೆಗೆ ಹಲವಾರು ಯುವನಟರ ಚಿತ್ರಗಳಲ್ಲಿ ಅಭಿನಯಿಸಿ ಜೀವ ತುಂಬಿದ್ದಾರೆ.

ರಕ್ಷಿತ್ ಶೆಟ್ಟಿ ಅಭಿನಯದ ' ಗೋದಿ ಬಣ್ಣ ಸಾಧಾರಣ ಮೈಕಟ್ಟು' ಎಂಬ ಚಲನಚಿತ್ರದಲ್ಲಿ ಅಲಜೈಮರ್ ಕಾಯಿಲೆಯಿಂದ ಬಳಲುವ ವ್ಯಕ್ತಿಯಾಗಿ ಅಮೋಘ ಪಾತ್ರ ಪೋಷಣೆ ಮಾಡಿದ ಅನಂತನಾಗ್ ಅಭಿನಯ ಪ್ರಶಂಸೆಗೆ ಪಾತ್ರವಾಗಿದೆ.

ಅನಂತ್ ನಾಗ್ ಅವರು ಚಲನಚಿತ್ರ ನಟಿ ಗಾಯತ್ರಿ ಅವರನ್ನು ಮದುವೆಯಾಗಿದ್ದಾರೆ ಅವರಿಗೆ ಅದಿತಿ ಎಂಬ ಮಗಳು ಇದ್ದಾಳೆ. ಸಹೋದರ ಶಂಕರ ನಾಗ್ ಅವರ ಅಕಾಲಿಕ ಅಗಲಿಕೆ ಅನಂತ್ ನಾಗ್ ಅವರನ್ನು ಬಹಳಷ್ಟು ಕಾಲ ವಿಚಲಿತಗೊಳಿಸಿತ್ತು.

ರಾಜಕೀಯದಲ್ಲಿಯೂ ಸಕ್ರಿಯರಾಗಿದ್ದ ಅನಂತನಾಗ್ ಜೆ.ಎಚ್. ಪಟೇಲ್ ಅವರ ಸರ್ಕಾರದಲ್ಲಿ ಶಾಸಕರಾಗಿ, ಎಂಎಲ್ಸಿಯಾಗಿ, ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಚಿವರಾಗಿ ಕಾರ್ಯನಿರ್ವಹಿಸಿದರು. 2004ರಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಘಟಾನುಘಟಿ ರಾಜಕಾರಣಿಗಳಾದ ಎಸ್.ಎಮ್. ಕೃಷ್ಣ ಮತ್ತು ಚಲನಚಿತ್ರ ರಂಗದ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಅವರ ವಿರುದ್ಧ ಅನಂತನಾಗ್ ಕಣಕ್ಕಿಳಿದಿದ್ದು ವಿಫಲರಾಗಿದ್ದರು. ಮಿಂಚಿನ ಓಟ, ಹೊಸ ನೀರು, ಅವಸ್ಥೆ, ಗಂಗವ್ವ ಗಂಗಾಮಾಯಿ ಚಿತ್ರಗಳಿಗೆ ಅತ್ಯುತ್ತಮ ನಟ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದ ಅನಂತನಾಗ್ ಅವರು ಜೀವಮಾನದ ಸಾಧನೆಗಾಗಿ 2011-12 ರಲ್ಲಿ ವಿಷ್ಣುವರ್ಧನ್ ಪ್ರಶಸ್ತಿಯನ್ನು ಪಡೆದಿದ್ದಾರೆ.

ಪ್ರೇಮಲೋಕಲು, ನಾ ನಿನ್ನ ಬಿಡಲಾರೆ, ಬಾರಾ, ಹೆಂಡ್ತಿಗೆ ಹೇಳಬೇಡಿ ಉದ್ಭವ, ಗೌರಿ ಗಣೇಶ, ಗೋಧಿ ಬಣ್ಣ ಸಾಧಾರಣ ಮೈಕಟ್ಟು ಚಲನಚಿತ್ರಗಳಿಗೆ ದಕ್ಷಿಣ ಭಾರತದ ಅತ್ಯುತ್ತಮ ನಟ ಎಂದು ಫಿಲಂಫೇರ್ ಪ್ರಶಸ್ತಿಯನ್ನು ಪಡೆದಿದ್ದಾರೆ. ತಾಜ್ ಮಹಲ್, ವಾಸ್ತು ಪ್ರಕಾರ, ಅರಮನೆ ಚಿತ್ರಗಳಿಗೆ ಕೂಡ ಅತ್ಯುತ್ತಮ ಪೋಷಕ ನಟ ಎಂದು ಫಿಲಂ ಫೇರ್ ನಿಂದ ನಾಮ ನಿರ್ದೇಶನಗೊಂಡಿದ್ದರು ಅನಂತ್ ನಾಗ್. ಗಾಳಿಪಟ 2 ಚಿತ್ರದಲ್ಲಿ ಚಿತ್ರನಟ ಗಣೇಶ್ ಅವರ ಶಿಕ್ಷಕನ ಪಾತ್ರಧಾರಿಯಾಗಿ ಅಮೋಘ ಅಭಿನಯ ನೀಡಿದ ಅನಂತನಾಗ್ ಕಳೆದ ವರ್ಷ ತಮ್ಮ ಚಿತ್ರ ಜೀವನದ 50ನೇ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸಿದರು.

ಅನಂತ್ ನಾಗ್ ಒಳ್ಳೆಯ ವಾಗ್ಮಿಯು ಹೌದು ಇಂದಿಗೂ ಕೂಡ ಸ್ಪಷ್ಟವಾಗಿ ಮಂತ್ರೋಚ್ಚಾರ ಮಾಡುವ, ಶ್ಲೋಕಗಳನ್ನು ಹೇಳುವ, ವಾದ್ಯಗಳನ್ನು ನುಡಿಸುವ ಅನಂತ್ ನಾಗ್ ಬಹುಮುಖ ಪ್ರತಿಭೆ.

75ರ ಇಳಿ ವಯಸ್ಸಿನಲ್ಲಿಯೂ ಕೂಡ ಅತ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಚಲನಚಿತ್ರರಂಗಕ್ಕೆ ಕಾಲಿಟ್ಟು 51 ವರ್ಷಗಳಾಗಿದ್ದು ಭಾರತ ದೇಶದ ಘನ ಸರಕಾರವು ನೀಡುವ ಪದ್ಮಭೂಷಣ ಪ್ರಶಸ್ತಿಗೆ ಅವರು ಪಾತ್ರರಾಗಿದ್ದು ಕಳೆದ ವರ್ಷ ರಾಷ್ಟ್ರಪತಿ ಭವನದ ಬ್ಯಾಂಕ್ವೆಟ್ ಹಾಲ್ ನಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು ಅವರಿಂದ ಅನಂತ್ ನಾಗ್ ಅವರು ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ಇದೀಗ ಭಾರತೀಯ ಚಿತ್ರರಂಗದ ಅತ್ಯಂತ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯು ಅನಂತನಾಗ ಅವರಿಗೆ ದೊರೆತಿರುವುದು ಮತ್ತಷ್ಟು ಹೆಮ್ಮೆಯ ಹಾಗೂ ಸಂತಸದ ವಿಷಯ. 1995ರಲ್ಲಿ ಡಾಕ್ಟರ್ ರಾಜ್ ಅವರ ನಂತರ ಈ ಪ್ರಶಸ್ತಿಯನ್ನು ಪಡೆದ ಎರಡನೇ ಕನ್ನಡದ ಅಭಿಜಾತ ಕಲಾವಿದ ಅನಂತ್ ನಾಗ್. ಅನಂತ್ ನಾಗ್ ರವರ ಬಹುಮುಖ ಪ್ರತಿಭೆಯನ್ನು ವೀಕ್ಷಿಸಿದ ಕನ್ನಡದ ಜನತೆಗೆ ಅವರಿಗೆ ಭಾರತೀಯ ಚಲನಚಿತ್ರ ಹೆಂಗದ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಲಭಿಸಿದ್ದು ಸಮಸ್ತ ಕನ್ನಡ ಚಲನಚಿತ್ರ ರಂಗದ ಅಭಿಮಾನಿಗಳ ಪಾಲಿಗೆ ಅತೀವ ಸಂತಸದ ವಿಷಯವಾಗಿದೆ . ಸಮಸ್ತ ಕನ್ನಡಾಭಿಮಾನಿಗಳ ಪರವಾಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.



**ವೀಣಾ ಹೇಮಂತ್ ಗೌಡ**
**ಪಾಟೀಲ, ಮುಂಡರಗಿ ಗದಗ.**

## ಕುಬೇರನ ಗರ್ವಭಂಗ



ಕುಬೇರನಿಗೆ ತನ್ನ ಸಂಪತ್ತನ್ನೆಲ್ಲ ಗಣಪತಿಗೆ ತೋರಿಸುವ ಆಸೆ ಹುಟ್ಟಿತು, ಒಂದು ದಿನ ಗಣಪತಿಗೆ ಊಟಕ್ಕೆ ಮನೆಗೆ ಕರೆದ, ಮುಂದೇನಾಯಿತು ಲೇಖಕರಾದ ಚೇತನ ಭಾರ್ಗವ ಅವರ ಗಣಪತಿ ಹಾಗೂ ಕುಬೇರನ ಕತೆಯನ್ನು ಪೂರ್ತಿಯಾಗಿ ಓದಿ?ಟಿವಿ ಶೋಗಳನ್ನು ವೀಕ್ಷಿಸಿ

ಕುಬೇರ ಅಷ್ಟ ದೇವತೆಗಲ್ಲೊಬ್ಬ ಸಂಪತ್ತು, ಐಶ್ವರ್ಯದ ಅಧಿಪತಿ. ಆತನ ಖಜಾನೆ ಅಪ್ರತಿಮವಾಗಿತ್ತು. ಹೀಗಿರಲಾಗಿ ಒಮ್ಮೆ ಕುಬೇರನಿಗೆ ತನ್ನ ಸಂಪತ್ತಿನ ಬಗ್ಗೆ ಗರ್ವವುಂಟಾಯಿತು. ಎಲ್ಲರೂ ಆತನ ಸಂಪತ್ತನ್ನು ಹೊಗಳುವವರೇ. ಆತನಿಗೆ ತನ್ನ ಸಂಪತ್ತನ್ನು ಗಣಪತಿಗೆ ತೋರಿಸಿ ಪ್ರದರ್ಶನ ಮಾಡಿ ಆ ಮೂಲಕ ತನ್ನ ಶ್ರೀಮಂತಿಕೆಯನ್ನು ಬಾಲ ಬ್ರಹ್ಮಚಾರಿಯಾದ ಕೈಲಾಸವಾಸಿಯಾದ ಗಣಪನಿಗೆ ತೋ-ರಿಸುವ ಉಮೇದು ಮೂಡಿತು. ಅದರಂತೆ ಗಣಪನನ್ನು ಭೋಜನಕ್ಕೆ ಆಮಂತ್ರಿಸಿ ಆತಿಥ್ಯ ನೀಡಿ ತನ್ಮೂಲಕ ತನ್ನ ವೈಭವದ ಪ್ರದರ್ಶನಕ್ಕೆ ಸಿದ್ಧನಾದ.

ಗಣಪತಿಗೆ ಕುಬೇರನ ಅರಮನೆಯಿಂದ ಆಮಂತ್ರಣ ಹೋಯಿತು. ಈತನ ಉದ್ದೇಶದ ಅರಿವಿದ್ದ ಗಣಪ ಶಿವ ಪಾರ್ವತಿಯರ ಆಶೀರ್ವಾದ ಪಡೆದು ಕುಬೇರನ ಅರಮನೆಗೆ ನಡೆದ. ಕುಬೇರನ ಜೊತೆಗೆ ಲೋಕಾಭಿರಾಮವಾಗಿ ಮಾತಾಡುತ್ತ ತಾನು ಆತಿಥ್ಯ ಸ್ವೀಕರಿಸುವೆನೆಂದು ಆದರೆ ತಾನು ಸಾಕು ಎನ್ನುವರೆಗೂ ತನಗೆ ಭೋಜನ ಬಡಿಸುತ್ತಲೇ ಇರಬೇಕೆಂದು ಕುಬೇರನಿಗೆ ಹೇಳಿದ. ಕುಬೇರನಿಗೆ ಇದೇನೂ ದೊಡ್ಡ ಬೇಡಿಕೆ ಎಂದೆನಿಸಲಿಲ್ಲ.

ಕುಬೇರ ತನ್ನ ಅರಮನೆಯ ವಿಶಾಲ ಜಗಲಿಯ ಮೂಲಕ ಗಣಪನನ್ನು ಭೋಜನಶಾಲೆಗೆ ಕರೆದೊಯ್ದ. ತನ್ನ ಬಗೆ ಬಗೆಯಾ ರತ್ನ ಖಚಿತ ಮೊಗಸಾಲೆ ಸಿಂಹಾಸನಗಳು ವಜ್ರ ವೈಡೂರ್ಯ ಆಭರಣ ಎಲ್ಲವೂ ಕಣ್ಣಿಗೆ ಬೀಳುವ ಹಾಗೆ ಮಾಡಿ ರತ್ನಖಚಿತ ಚಿನ್ನದ ಮಣೆಯ ಮೇಲೆ ಗಣಪನನ್ನು ಕುಳ್ಳಿರಿಸಿ ತನ್ನವರಿಗೆ ಬಡಿಸಲು ಹೇಳಿದ.

ಬಗೆ ಬಗೆಯ ಭಕ್ಷಗಳನ್ನು ತಿನಿಸುಗಳನ್ನು ಹಣ್ಣು ಹಂಪಲುಗಳನ್ನೂ ಗಣಪನಿಗೆ ಬಡಿಸಲಾಯಿತು. ಗಣಪ ಅದನ್ನು ಒಂದೇ ಏಟಿಗೆ ತಿಂದು ಮುಗಿಸಿದ. ಮತ್ತೆ ಮತ್ತೆ ಪಾಕಶಾಲೆಯಲ್ಲಿದ್ದ ಎಲ್ಲಾ ತಿನಿಸುಗಳನ್ನೂ ಒಬ್ಬೊಬ್ಬರೇ ತಂದು ಬಡಿಸಿದರು. ಗಣಪ ಒಂದೊಂದು ಭಕ್ಷ್ಯಗಳನ್ನು ತರುವ ಹಾಗೆಯೇ ತನ್ನ ಸೊಂಡಿಲಿನಿಂದ ಎಳೆದುಕೊಂಡು ತಿಂದು ಮುಗಿಸುತ್ತಿದ್ದ. ಕುಬೇರನ ಪಾಕಶಾಲೆಯಲ್ಲಿದ್ದ ಎಲ್ಲಾ ತಿನಿಸು ಖಾಲಿಯಾಯಿತು.

ತನ್ನ ಹಸಿವು ಇನ್ನೂ ನೀಗಿಲ್ಲ ಎಂದ ಗಣಪ ತನ್ನ ಸೊಂಡಿಲನ್ನು ನೀಳವಾಗಿಸಿ ಹ್ಲೂಕ-ರಿಸಿದ. ಪಾಕಶಾಲೆಯ ಪಾತ್ರೆ ಪರಡಿ, ಸೌಟು, ಮಣೆ ಹೀಗೆ ಒಂದೊಂದೇ ತೇಲಿಬಂದು ಗಣಪನ ಹೊಟ್ಟೆಗೆ ಆಹುತಿಯಾದವು. ಅಲ್ಲಿಗೆ ನಿಲ್ಲದ ಗಣಪ ತನ್ನ ಸೊಂಡಿಲಿನಿಂದ ಎಲ್ಲವನ್ನೂ ಹೀರುತ್ತಾ ಕುಬೇರನ ಖಜಾನೆ, ಸಿಂಹಾಸನ, ಐಶ್ವರ್ಯಗಳನ್ನೆಲ್ಲ ಭುಜಿಸಲು ಆರಂಭಿಸಿದ.

ಕುಬೇರನಿಗೆ ತನ್ನ ತಪ್ಪಿನ ಹಾಗೂ ಗಣಪನ ಶಕ್ತಿಯ ಅರಿವಾಯಿತು. ತನ್ನ ಅಹಂಕಾರವನ್ನು ಮನ್ನಿಸಬೇಕು. ತನ್ನ ಗರ್ವಕ್ಕೆ ತಕ್ಕ ಶಾಸ್ತಿ ಆಯಿತೆಂದು ಪಶ್ಚಾತ್ತಾಪ ಪಡುತ್ತಾ ಗಣಪನ ಕಾಲಿಗೆ ಬಿದ್ದ. ಗಣಪ ನಗುತ್ತ ಸಂಪತ್ತಿನ ಅಧಿದೇವತೆಯಾದ ನಿನಗೆ ಅಹಂಕಾರ ಸಲ್ಲದು. ಇನ್ನಾದರೂ ಈ ಗರ್ವ ತ್ಯಜಿಸಿ ಲೋಕದ ಹಿತಕ್ಕೆ ಗಮನ ಹ-ರಿಸಬೇಕೆಂದು ಹಿತವಚನ ಹೇಳುತ್ತಾ ಅವನಿಗೆ ಹರಸಿ ಕೈಲಾಸಕ್ಕೆ ತೆರಳಿದ.

## ಕಷ್ಟ ಪಟ್ಟರೆ ಅಮೃತದ ಸವಿ ನಮ್ಮದು



ಎಷ್ಟು ಕರಿಬೇಕು ನಿನ್ನ ಊಟಕ್ಕೆ ಅಂತ ಅಮ್ಮ ಒಂದೇ ಸಮ ರೇಗಿದಾಗಲೇ ಕಣ್ಣು ಗಡಿಯಾರದತ್ತ ಸರಿದು ಸಮಯ ಅಲೆದಾಗ ಆಗಲೇ ಒಂದು ಘಂಟೆ. ಬಂದೆ ಎಂದವಳು ಆಹಾ ಏನಮ್ಮ ನಿನ್ನ ಕೈಗುಣ ಎನ್ನುತ್ತಾ ಮೂರೂ ತುತ್ತು ಹೆಚ್ಚೆ ಸವಿದೆ,ಅಮ್ಮ ನಗುತ್ತ ಊರಿಂದ ಬರುವಾಗ ತಂದ ,ಮನೆಯಲ್ಲಿಯೇ ಬೆಳೆದ ತರಕಾ-ರಿಯಿಂದ ಅಡುಗೆ ಮಾಡಿದ್ದುಅದಕ್ಕೆ ರುಚಿ. ಬದುಕಿಗಾಗಿ ದುಡ್ಡಿನ ಹಿಂದೆ ಜೀವ ಪಣಕ್ಕಿಟ್ಟು ಓಡುವ ನಗರ ಜನರಿಗೆ ಇದೆಲ್ಲ ಎಲ್ಲಿ ಲಭ್ಯ ಎಂದು ನಿಟ್ಟುಸಿರು ಬಿಟ್ಟರು.

ಅಮ್ಮ ಹೇಳಿದ ಆ ಮಾತುಗಳು ನೂರಕ್ಕೂ ನೂರು ಸತ್ಯ. ಮದುವೆ ಆಗಿ ಬೆಂಗಳೂರಿಗೆ ಬಂದಾಗ ನಗರ ಜೀವನ ಎಲ್ಲವೂ ಹೊಸತು. ಹಳ್ಳಿಯ ಸೊಗಡಲ್ಲಿ ಬೆಳೆದ ನನ್ನನ್ನು ಕ್ಯಾಂಕ್ರೀಟ್ ನಾಡು ಸ್ವಾಗತಿಸಿತ್ತು. ಗೃಹಿಣಿಯಾಗಿ, ಶಿಕ್ಷಕಿಯಾಗಿ ತೃಪ್ತಿದಾಯಕ ಬದುಕು. ಊರ, ಬಾಲ್ಯ ಪೇಟೆಯಲ್ಲೂ ಕಾಡಲು ನಿಂತಾಗ ಆರಂಭಿಸಿದ್ದು ಈ ನಮ್ಮ ಹೆಮ್ಮೆಯ ಟೆರೇಸ್ ಗಾರ್ಡನ್. ಬೆಂಗಳೂರಿನ ದುಬಾರಿ ದುನಿಯಾದಲ್ಲಿ ನಮ್ಮದೊಂದು ಸ್ವಂತ ಚಿಕ್ಕ ಸೂರು 20-30ರ ನಿವೇಶನ. ಇದರಲ್ಲೇ ಮೊದಲಿಗೆ ಸಣ್ಣದಾಗಿ 5-6 ಮೂಟೆಗಳಲ್ಲಿ ಬೆಳೆಸಿ ಈಗ ಅದು ಸುಮಾರು 90 ಮೂಟೆಗಳಷ್ಟು ವಿಸ್ತರಿಸಿದೆ.

ಕೈ ಕೆಸರಾದರೆ ಬಾಯಿ ಮೊಸರು ಎಂಬ ಗಾದೆ ಮಾತು ನಿಜಕ್ಕೂ ಇಲ್ಲಿ ಅನ್ವಯ. ಮೊದಲಿಗೆ ಹ-ರಿವೆ ಸೊಪ್ಪಿನಿಂದ ಪ್ರಾರಂಭಗೊಂಡು ಈಗ ಬೀನ್ಸ್, ಮೂಲಂಗಿ, ಬಸಳೆ, ಪಾಲಕ್, ಬೆಂಡೆ, ಬದನೇಕಾಯಿ, ದಂಟಿನ ಸೊಪ್ಪು, ಪುದಿನ, ಮಂಗಳೂರು ಮಲ್ಲಿಗೆ, ಕೆಸು ಇತ್ಯಾದಿಗಳನ್ನ ಒಳಗೊಂಡಿದೆ. ಬಿಡುವಿನ ಸಮಯ ಮೀಸಲಿಟ್ಟರೆ ಖಂಡಿತ ರುಚಿಯಾದ ಶುಚಿಯಾದ ತರಕಾರಿಗಳು ನಮ್ಮನೆ ಅಡುಗೆ ಮನೆಯಲ್ಲಿ ಪಾಲು ಪಡೆಯೋದರಲ್ಲಿ ಸಂದೇಹವಿಲ್ಲ. ಒಂದು ತಿಂಗಳಿಗೊಮ್ಮೆ ಹಸುವಿನ ಗೊಬ್ಬರ ಮತ್ತು ಶೇಂಗಾ ಹಿಂಡಿಯನ್ನು 4-5 ದಿನಗಳ ಕಾಲ ನೆನಸಿ ಹಾಕುವುದು ಸೂಕ್ತ. ಇರುವ ಸ್ವಲ್ಪ ಜಾಗದಲ್ಲೇ ಹರಿವೆ, ಪಾಲಕ್, ಬಸಳೆ, ಪುದಿನ ಬೆಳೆಸಿ ತುಸು ಮಟ್ಟಿಗೆ ಆರ್ಗಾನಿಕ್ ಸಿಹಿಯನ್ನು ಸವಿಯಬಹುದು. ಶ್ರದ್ಧೆ ಜೊತೆಗೆ ಛಲವಿದ್ದರೆ ನಮಗಾಗುವಷ್ಟು ಫ್ರೆಶ್ ರಾಸಾಯನಿಕ ಮುಕ್ತ ಅಡುಗೆ ನಮ್ಮದು. ಕಷ್ಟ ಪಟ್ಟರೆ ಅಮೃತದ ಸವಿ ನಮ್ಮದು ಏನಂತೀರಾ?

# ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ಅಗತ್ಯ: ಬಸವರಾಜ ಬೆಣ್ಣೆಶೀರೂರ

ಅ.ಶ. ಸುದ್ದಿ ಕುಕನೂರು

**ಕುಕನೂರು: ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವುದು ಎಲ್ಲ ಇಲಾಖೆಗಳ ಜವಾಬ್ದಾರಿಯಾಗಿದೆ ಎಂದು ಕುಕನೂರು ತಾಲೂಕು ದಂಡಾಧಿಕಾರಿ ಬಸವರಾಜ ಬೆಣ್ಣೆಶೀರೂರ ಹೇಳಿದರು. ಕುಕನೂರಿನ ವಿದ್ಯಾನಂದ ಕಾಲೇಜು ಆವರಣದಲ್ಲಿ ಶನಿವಾರ ನಡೆದ ಕುಕನೂರು ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ" ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಪ್ರಜಾಸೇವೆ ಆಂದೋಲನವು ಸಾರ್ವಜನಿಕರ ಸಮಸ್ಯೆಗಳಿಗೆ ವಿವಿಧ ಇಲಾಖೆಗಳ ಮೂಲಕ ತ್ವರಿತ ಪರಿಹಾರ ಕಲ್ಪಿಸುವ ಮಹತ್ವದ ವೇದಿಕೆಯಾಗಿದೆ ಎಂದರು.**

ಕುಕನೂರು ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯಿತಿಗಳ ಸಾರ್ವಜನಿಕರು ತಮ್ಮ ಸಮಸ್ಯೆ ಹಾಗೂ ಕುಂದುಕೊರತೆಗಳ ಕುರಿತು ಅರ್ಜಿ ಸಲ್ಲಿಸಿದಲ್ಲಿ, ಸಾಧ್ಯವಾದಷ್ಟು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ನಂತರ ಮಾತನಾಡಿದ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬೆಟದಪ್ಪ ಮಾಳೆಕೊಪ್ಪ, ಸರ್ಕಾರ ಜಾರಿಗೆ ತಂದಿರುವ ಪ್ರಜಾಸೇವೆ ಆಂದೋಲನವನ್ನು ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಹಾಗೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು.

ಆಂದೋಲನದಲ್ಲಿ ಸ್ವೀಕರಿಸಲಾಗುವ ಅರ್ಜಿಗಳನ್ನು ಐಪಿಜಿಆರ್‌ಎಸ್ (IPGRS) ಪೋರ್ಟಲ್‌ನಲ್ಲಿ ದಾಖಲಿಸಿ ಸಂಬಂಧಪಟ್ಟ ಇಲಾಖೆಗೆ ರವಾನಿಸಲಾಗುತ್ತದೆ. ಸ್ಥಳದಲ್ಲಿಯೇ ಪರಿಹರಿಸಬಹುದಾದ ಅರ್ಜಿಗಳಿಗೆ ತಕ್ಷಣ ಪರಿಹಾರ ಕಲ್ಪಿಸಲಾಗುವುದು. ಸ್ಥಳದಲ್ಲಿಯೇ ಪರಿಹರಿಸಲು ಸಾಧ್ಯವಾಗದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಸಾರ್ವಜನಿಕರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಪದೇಪದೇ ಸರ್ಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಸರ್ಕಾರದ ಸೇವೆಗಳನ್ನು ಜನರ ಮನೆಬಾಗಿಲಿಗೆ ತಲುಪಿಸುವುದು ಪ್ರಜಾಸೇವೆ ಆಂದೋಲನದ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಮುಖ್ಯಾಧಿಕಾರಿಗಳು, ಪೊಲೀಸ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ (RWS), ಪಂಚಾಯತ್ ರಾಜ್, ಆರೋಗ್ಯ, ಅರಣ್ಯ, ಅಬಕಾರಿ, ತೋಟಗಾರಿಕೆ, ಕೃಷಿ, ರೇಷ್ಮೆ, ಸಮಾಜ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ತಾಲೂಕು ಮಟ್ಟದ ವಿವಿಧ ಇಲಾಖೆಗಳ ಸಿಬ್ಬಂದಿ, ಗ್ರಾಮ ಪಂಚಾಯಿತಿ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಆಳಂದದಲ್ಲಿ ತಾಲೂಕು ಮಟ್ಟದ ಶ್ರೀ ವಿಶ್ವಕರ್ಮ ಪೂಜಾಮಹೋತ್ಸವ ಹಾಗೂ ಸಮಾವೇಶ

ಅ.ಶ. ಸುದ್ದಿ ಆಳಂದ

**ಆಳಂದ: ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ (ರಿ.), ಬೆಂಗಳೂರು, ತಾಲೂಕು ಘಟಕ ಆಳಂದ ವತಿಯಿಂದ ತಾಲೂಕು ಮಟ್ಟದ ಶ್ರೀ ವಿಶ್ವಕರ್ಮ ಪೂಜಾಮಹೋತ್ಸವ ಹಾಗೂ ಸಮಾವೇಶ ಸಮಾರಂಭವನ್ನು 27-09-2026 ರಂದು ಆಯೋಜಿಸಲಾಗಿದೆ.**



ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು, ಪದಾಧಿಕಾರಿಗಳು, ಗಣ್ಯರು ಹಾಗೂ ವಿಶ್ವಕರ್ಮ ಸಮಾಜದ ಬಂಧುಗಳು ಭಾಗವಹಿಸಲಿದ್ದು, ವಿಶ್ವಕರ್ಮರ ಪೂಜೆ, ಧಾರ್ಮಿಕ ಕಾರ್ಯಕ್ರಮ ಹಾಗೂ ಸಮಾಜದ ವಿವಿಧ ವಿಷಯಗಳ ಕುರಿತು ಸಮಾವೇಶ ನಡೆಯಲಿದೆ. ಸಮಾರಂಭಕ್ಕೆ ವಿಶ್ವಕರ್ಮ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ (ರಿ.) ತಾಲೂಕು ಘಟಕ, ಆಳಂದದ ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

## ನಾಳೆ ಪೊಲೀಸ್ ಕಾನ್‌ಸ್ಟೆಬಲ್ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ : ನಿಷೇಧಾಜ್ಞೆ ಜಾರಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗಳಿಗೆ ನಾಳೆ ನಡೆಯಲಿರುವ ನೇಮಕಾತಿ ಪರೀಕ್ಷೆಯ ಸಂಬಂಧ ಪರೀಕ್ಷಾ ಕೇಂದ್ರಗಳ ಸುತ್ತ ನಿಷೇದಾಜ್ಞೆ ಜಾರಿಗೊಳಿಸಲಾಗಿದೆ.**



ನಾಳೆ ಬೆಳಗ್ಗೆ 7 ಗಂಟೆಯಿಂದ ಪರೀಕ್ಷೆ ಮುಕ್ತಾಯಗೊಳ್ಳುವವರೆಗೆ ಎಲ್ಲಾ ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಲಿನ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. 200 ಮೀಟರ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಜೆರಾಕ್?ಸ ಅಂಗಡಿಗಳನ್ನು ಮುಚ್ಚಲು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಅವರು ಆದೇಶ ಹೊರಡಿಸಿದ್ದಾರೆ. ಕೆಎಸ್‌ಆರ್‌ಪಿಸಿ ಹುದ್ದೆಗಳ ಮತ್ತು ಸ್ಥಳೀಯ ವೃಂದದ ಕೆಎಸ್‌ಆರ್‌ಪಿ, ಕೆಎಸ್‌ಐಎಸ್‌ಎಫ್, ಭಾರತೀಯ ಮೀಸಲು ಪಡೆಗೆ ಉಳಿಕೆ ಮೂಲ ವೃದದ ಹುದ್ದೆಗಳ ನೇಮಕಾತಿ ಲಿಖಿತ ಪರೀಕ್ಷೆಗಳನ್ನು ಸುಗಮವಾಗಿ ಹಾಗೂ ಸುವ್ಯವಸ್ಥಿತವಾಗಿ ನಡೆಸಲು ಈ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

# ಕುಕನೂರು ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಸಭೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕುಕನೂರು ಪಟ್ಟಣದ ಮತ್ತು ಹೋಬಳಿಯ ಎಲ್ಲಾ ಗ್ರಾಮಗಳ ಸಮಗ್ರ ಅಭಿವೃದ್ಧಿ ಹಾಗೂ ಸಾರ್ವಜನಿಕರ ಕುಂದುಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸುವ ಹೊಣೆಗಾರಿಕೆ ಎಲ್ಲ ಇಲಾಖೆಗಳ ಮೇಲಿದೆ ಎಂದು ಕುಕನೂರು ತಹಶಿಲ್ದಾರರಾದ ಬಸವರಾಜ ಬೆಣ್ಣೆಶೀರೂರ ಅವರು ಹೇಳಿದರು.**

ಪ್ರಜಾಸೇವಾ ಇಲಾಖೆ ಹಾಗೂ ಕುಕನೂರು ತಾಲ್ಲೂಕು ಆಡಳಿತದ ಸಹಯೋಗದಲ್ಲಿ ಕುಕನೂರಿನ ವಿದ್ಯಾನಂದ ಕಾಲೇಜು ಆವರಣದಲ್ಲಿ ಶನಿವಾರ (ಸೆ. 19ರಂದು) ಹಮ್ಮಿಕೊಂಡಿದ್ದ ಹೊಬಳಿ ಮಟ್ಟದ ಪ್ರಜಾಸೇವಾ ಆಂದೋಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಧ್ಯೇಯವಾಕ್ಯದೊಂದಿಗೆ ನಡೆಯುತ್ತಿರುವ ಪ್ರಜಾಸೇವೆ ಆಂದೋಲನವು ಸಾರ್ವಜನಿಕರ ಸಮಸ್ಯೆಗಳಿಗೆ ಸರ್ಕಾರದ ವಿವಿಧ ಇಲಾಖೆಗಳ ಮೂಲಕ ತ್ವರಿತ ಪರಿಹಾರ ಒದಗಿಸುವ ಮಹತ್ವದ ವೇದಿಕೆಯಾಗಿದೆ.



ಕುಕನೂರು ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮ ಪಂಚಾಯಿತಿಗಳ ಸಾರ್ವಜನಿಕರು ತಮ್ಮ ಸಮಸ್ಯೆಗಳು ಹಾಗೂ ಕುಂದುಕೊರತೆಗಳ ಕುರಿತು ಸಲ್ಲಿಸಿದ ಅರ್ಜಿಗಳಿಗೆ ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕುಕನೂರು ತಾ.ಪಂ ಇಓ ಬೆಟದಪ್ಪ ಮಾಳೆಕೊಪ್ಪ ಅವರು ಮಾತನಾಡಿ, ಸರ್ಕಾರ ಜಾರಿಗೆ ತಂದಿರುವ ಪ್ರಜಾಸೇವೆ ಆಂದೋಲನವನ್ನು ತಾಲೂಕು, ಹೋಬಳಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು ಹಾಗೂ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಇದೊಂದು ಉತ್ತಮ ವೇದಿಕೆಯಾಗಿದೆ ಎಂದರು. ಈ ಆಂದೋಲನದಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಐಪಿಜಿಆರ್‌ಎಸ್ ಪೋರ್ಟಲ್‌ನಲ್ಲಿ ದಾಖಲಿಸಿ ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಲಾಗುತ್ತದೆ.

ಸ್ಥಳದಲ್ಲಿಯೇ ಪರಿಹರಿಸಬಹುದಾದ ಅರ್ಜಿಗಳಿಗೆ ತಕ್ಷಣ ಪರಿಹಾರ ಒದಗಿಸಲಾಗುತ್ತದೆ. ಸ್ಥಳದಲ್ಲಿಯೇ ಪರಿಹರಿಸಲು ಸಾಧ್ಯವಾಗದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಪೊಲೀಸ್ ಇಲಾಖೆ, ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

# ಮಂಗಳೂರು ಮೀನು ಮಾರುಕಟ್ಟೆಗೆ ಭೇಟಿ ನೀಡಿ ಮೀನುಗಾರರ ಕಷ್ಟ ಕೇಳಿದ ಸಿಎಂ ಡಿಕೆಶಿ

ಅ.ಶ. ಸುದ್ದಿ ಮಂಗಳೂರು

**ಮಂಗಳೂರು: ಸಚಿವ ಸಂಪುಟಸಭೆಯ ಹಿನ್ನೆಲೆಯಲ್ಲಿ ಮಂಗಳೂರು ಪ್ರವಾಸದಲ್ಲಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದು ಮುಂಜಾನೆ ಮೀನು ಮಾರುಕಟ್ಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಲ್ಲದೇ ಮೀನುಗಾರರ ಜೊತೆ ಸಮಾಲೋಚನೆ ನಡೆಸಿದರು.**

ಮುಖ್ಯಮಂತ್ರಿಯವರ ದಿಢೀರ್ ಭೇಟಿ ಹಿನ್ನೆಲೆಯಲ್ಲಿ ಭದ್ರತಾ ದೃಷ್ಟಿಯಿಂದ ಅಧಿಕಾರಿಗಳು ಮೀನು ಮಾರುಕಟ್ಟೆಯ ಚಟುವಟಿಕೆಗಳನ್ನು ಸ್ಥಗಿತ ಗೊಳಿಸಿದ್ದರು. ಮುಖ್ಯಮಂತ್ರಿಯವರು ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳೀಯರ ಜೊತೆ ಚರ್ಚೆ ನಡೆಸಿದ ಬಳಿಕ ಅರಬ್ಬೀ ಸಮುದ್ರದಲ್ಲಿ ಪ್ರಯಾಣಿಸಿ ಮೀನುಗಾರರ ಕಷ್ಟ-ನಷ್ಟಗಳನ್ನು ಆಲಿಸಿದರು. ಇದೇ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೆ ತಾವು ಕಾಂಗ್ರೆಸ್ ಅಧ್ಯಕ್ಷನಾಗಿದ್ದಾಗ ಮೀನುಗಾರರು ಮತ್ತು ಮಾರಾಟಗಾರರ ಜೊತೆ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದ್ದೆ. ಮೀನುಗಾರರ ಸಂಘದವರು ಈಗ ತಮನ್ನು ಭೇಟಿ ಮಾಡಿ ಹಲವು ಬೇಡಿಕೆಗಳನ್ನು ಮಂಡಿಸಿದ್ದಾರೆ. ಹೀಗಾಗಿಯೇ ಇಂದು ಬೆಳಗ್ಗೆ ಖುದ್ದಾಗಿ ಸಮಸ್ಯೆ ತಿಳಿದುಕೊಳ್ಳಲು ಬೆಳಗ್ಗೆ 5 ಗಂಟೆಗೆ ಆಗಮಿಸಿದ್ದೇನೆ ಎಂದರು. ನಾನು ಇಲ್ಲಿಗೆ ಭೇಟಿ ನೀಡುವ ವೇಳೆಯಲ್ಲಿ ಮಾರುಕಟ್ಟೆಯ ಚಟುವಟಿಕೆಗಳನ್ನು ನಿಲ್ಲಿಸಲಾಗಿದೆ. ಇದು ತಮಗೆ ಸಮಾಧಾನ ತಂದಿಲ್ಲ. ಚಟುವಟಿಕೆ ನಿಲ್ಲಿಸಲು ಅಧಿಕಾರಿಗಳು ಅಥವಾ ಪೊಲೀಸರು ಕಾರಣ ಇರಬಹುದು. ಈ ಬಗ್ಗೆ ತನಿಖೆ ಮಾಡಿ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಒಂದು ವೇಳೆ ಅಧಿಕಾರಿಗಳ ಪಾತ್ರ ಇದ್ದರೆ, ಈ ದಿನವೇ ಅಮಾನತುಗೊಳಿಸಲು ಆದೇಶಿಸುತ್ತೇನೆ ಎಂದರು.



ಮೀನುಗಾರಿಕೆಯ ವ್ಯವಹಾರ ಬಹು ಮುಖ್ಯವಾಗಿದೆ. ದೇಶ ವಿದೇಶಗಳಿಂದಲೂ ಜನ ಬರುತ್ತಾರೆ. ಒಂದು ಗಂಟೆ ವ್ಯವಹಾರ ನಿಂತರೆ ಸಾಕಷ್ಟು ನಷ್ಟವಾಗುತ್ತದೆ ಮತ್ತು ಜನರಿಗೂ ತೊಂದರೆಯಾಗುತ್ತದೆ. ಮುಖ್ಯಮಂತ್ರಿಯವರ ಭದ್ರತೆ ಎಂಬ ಕಾರಣಕ್ಕೆ ವ್ಯವಹಾರ ನಿಲ್ಲಿಸಿರುವುದು ಸರಿಯಲ್ಲ ಎಂದರು. ಈ ಭಾಗದಲ್ಲಿ ಕೆಲವರು ಅನಧಿಕೃತವಾಗಿ ಗೋಡೆ ಕಟ್ಟಿ ಸಂಚಾರಕ್ಕೆ ಅಡ್ಡಿಪಡಿಸಿದ್ದಾರೆ, ಅನುಮತಿ ಇಲ್ಲದೆ ಕಾಂಪೌಂಡ್ ಹಾಕಿದ್ದಾರೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಯಾರು ಎಷ್ಟೇ ದೊಡ್ಡವರಾಗಿದ್ದರೂ ಮುಲಾಜು ಇಲ್ಲದೆ ಕ್ರಮ ಕೈಗೊಂಡು, ಒತ್ತುವರಿ ತೆರವು ಮಾಡಿ ಸರ್ಕಾರಿ ಆಸ್ತಿಗಳನ್ನು ವಶಕ್ಕೆ ತೆಗೆದುಕೊಳ್ಳಬೇಕು. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದೇನೆ. ಖಾಸಗಿ ಆಸ್ತಿಗಳಾಗಿದ್ದರೆ ಅವುಗಳ ಸ್ವಾಧೀನಕ್ಕೆ ಕ್ರಮ ಕೈಗೊಳ್ಳಬೇಕು ಎಂದರು.

ಸಣ್ಣ ಸಣ್ಣ ಮೀನುಗಾರರ ಬೋಟ್‌ಗಳನ್ನು ನಿಲ್ಲಿಸಲು ಜಾಗದ ಸಮಸ್ಯೆ ಇದೆ. ಅದರ ಪರಿಹಾರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚೆ ನಡೆಸಲಾಗುವುದು ಎಂದರು.ಮೀನುಗಾರರದು ದೊಡ್ಡ ಸಮುದಾಯ. ಈ ಸಮುದಾಯದ ಆರ್ಥಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಬೇಕಿದೆ. ನಿನ್ನೆ ಸಚಿವ ಸಂಪುಟ ಸಭೆಯಲ್ಲಿ ಮೀನುಗಾರಿಕೆ ವಿಶ್ವವಿದ್ಯಾನಿಲಯ ಸ್ಥಾಪನೆ, ಬಂದರು ಚಟುವಟಿಕೆಗಳಿಗೆ ಬೆಂಬಲ ನೀಡುವುದು, ಮೀನುಗಾರಿಕೆ ಕಸುಬು ಹಾಗೂ ಅದರ ಶಿಕ್ಷಣಕ್ಕೆ ಒತ್ತು ನೀಡಲಾಗುವುದು ಎಂದು ತಿಳಿಸಿದರು.

ಮಂಗಳೂರು ಮತ್ತು ಕಾರವಾರದಲ್ಲಿ ಸಮುದ್ರ ಪಕ್ಕದಲ್ಲಿರುವ ಮೀನುಗಾರರಿಗೆ ಅಗತ್ಯ ಇರುವ ಎಲ್ಲಾ ರೀತಿಯ ಸಹಾಯ ಮಾಡಲು ನಿರ್ಧರಿಸಿದ್ದೇನೆ. ಮೀನುಗಾರರು ತಮ ಸಮಸ್ಯೆಗಳ ಬಗ್ಗೆ ಈ ಕ್ಷಣದಲ್ಲಿ ನನ್ನ ಬಳಿ ಹೇಳಲು ಹಿಂಜರಿಯುತ್ತಿರಬಹುದು. ಅದಕ್ಕೆ ಭಯದ ವಾತಾವರಣ ಅಥವಾ ಮಾಫಿಯಾ ಕಡಿವಾಣ ಇರಬಹುದು. ವಾಸ್ತವ ತಿಳಿದುಕೊಳ್ಳಲು ಅಧಿಕಾರಿಗಳಿಂದ ಗುಪ್ತ ವರದಿ ಪಡೆಯುತ್ತೇನೆ. ನ್ಯಾಯಯುತ ವ್ಯವಹಾರ ನಡೆಸಲು ಅಗತ್ಯ ಕ್ರಮ ಕೈಗೊಳ್ಳುತ್ತೇನೆ ಎಂದರು.

ಕೆಲವು ಕಡೆ ಹೂಳು ತೆಗೆಯದೆ ಬೋಟ್‌ಗಳು ಮುಳುಗಡೆಯಾಗುತ್ತಿವೆ. ಹೂಳು ತೆಗೆದು ಅದನ್ನು ಸಮುದ್ರಕ್ಕೆ ಹಾಕಬೇಕು ಎಂದು ಕೆಲವರು ಹೇಳುತ್ತಿದ್ದಾರೆ. ಇನ್ನೂ ಕೆಲವರು ಸಮುದ್ರದ ಪಕ್ಕದಲ್ಲೇ ಹೆಚ್ಚುವರಿ ಜಮೀನನ್ನು ಮೀಸಲಿಟ್ಟು, ಹೂಳಿನ ಮಣ್ಣನ್ನು ಸುರಿಯಬೇಕು ಎಂದು ಸಲಹೆ ನೀಡಿದ್ದಾರೆ. ಇದನ್ನು ಪರಿಶೀಲನೆ ಮಾಡುವುದಾಗಿ ಹೇಳಿದರು. ಕೇಂದ್ರ ಸರ್ಕಾರದ ಸಾಗರಮಾಲ ಯೋಜನೆಯಡಿ 25 ರಿಂದ 30 ಕೋಟಿ ರೂ.ಗಳು ಬಳಕೆ ಆಗದೆ, ವಾಪಸ್ ಹೋಗಿರುವ ಬಗ್ಗೆ ವರದಿ

# ಟಿಎಂಸಿ ಹೆಸರು-ಚಿಹ್ನೆಯನ್ನು ಸ್ಥಗಿತ : ಆಯೋಗದ ಕ್ರಮದ ವಿರುದ್ಧ ಸುಪ್ರೀಂ ಮೆಟ್ಟಿಲೇರಿದ ಮಮತಾ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಹೆಸರು ಮತ್ತು ಅಧಿಕೃತ 'ಹೂವು-ಹುಲ್ಲು' ಚಿಹ್ನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿರುವ ಕೇಂದ್ರ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಬಣವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.**

ಪಕ್ಷದ ಮೇಲಿನ ಅಧಿಕಾರಕ್ಕಾಗಿ ಮಮತಾ ಬ್ಯಾನರ್ಜಿ ನೇತೃತ್ವದ ಬಣ ಮತ್ತು ರಿತಬ್ರತ ಬ್ಯಾನರ್ಜಿ ನೇತೃತ್ವದ ಬಂಡಾಯ ಬಣದ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಮುಂಬರುವ ಉಪಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಚುನಾವಣಾ ಆಯೋಗವು ಎರಡೂ ಬಣಗಳಿಗೆ ತಾತ್ಕಾಲಿಕ ಹೆಸರು ಹಾಗೂ ಹೊಸ ಚಿಹ್ನೆಗಳನ್ನು ಹಂಚಿಕೆ ಮಾಡಿದೆ. ಮಮತಾ ಬಣಕ್ಕೆ 'ಮಮತಾ ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್' ಎಂಬ ಹೆಸರು ಮತ್ತು 'ಫುಟ್‌ಬಾಲ್ ಆಟಗಾರ' ಚಿಹ್ನೆ, ರಿತಬ್ರತ ಬಣಕ್ಕೆ 'ಡೆಮಾಕ್ರಟಿಕ್ ತೃಣಮೂಲ ಕಾಂಗ್ರೆಸ್' ಎಂಬ ಹೆಸರು ಹಾಗೂ 'ಲಕೋಟೆ' ಚಿಹ್ನೆ ನೀಡಲಾಗಿದೆ.



ಬಂಡಾಯ ನಾಯಕರ ವಾದವನ್ನು ಆಲಿಸುವಾಗ ಚುನಾವಣಾ ಆಯೋಗವು ಟಿಎಂಸಿ ಪಕ್ಷದ ಮೂಲ ಸಾಂಸ್ಥಿಕ ರಚನೆ ಮತ್ತು ಪದಾಧಿಕಾರಿಗಳ ಬಲವನ್ನು ಸರಿಯಾಗಿ ಪರಿಗಣಿಸಿಲ್ಲ ಎಂದು ಮಮತಾ ಬಣ ತನ್ನ ಅರ್ಜಿಯಲ್ಲಿ ಆರೋಪಿಸಿದೆ. ಪಕ್ಷಾಂತರ ನಿಷೇಧ ಕಾಯ್ದೆಯಡಿ 10 ಬಂಡಾಯ ಶಾಸಕರ ವಿರುದ್ಧ ಸಲ್ಲಿಸಲಾಗಿರುವ ಅನರ್ಹತಾ ಅರ್ಜಿಗಳ ಕುರಿತು ತೀರ್ಪು ನೀಡಲು ರಾಜ್ಯ ವಿಧಾನಸಭೆಯ ಸ್ಪೀಕರ್ ವಿಳಂಬ ಮಾಡುತ್ತಿರುವುದನ್ನೂ ಮಮತಾ ಬಣ ನ್ಯಾಯಾಲಯದಲ್ಲಿ ಪ್ರಶ್ನಿಸಿದೆ. ಬಂಡಾಯ ಬಣದ ನಾಯಕ ರಿತಬ್ರತ ಬ್ಯಾನರ್ಜಿ ಅವರಿಗೆ ನೀಡಿರುವ ವಿರೋಧ ಪಕ್ಷದ ನಾಯಕನ ಮಾನ್ಯತೆಯನ್ನು ರದ್ದುಗೊಳಿಸುವಂತೆ ಕೋರಿ ಮತ್ತೊಂದು ಪ್ರತ್ಯೇಕ ಅರ್ಜಿಯನ್ನೂ ಸಲ್ಲಿಸಲಾಗಿದೆ. ಭಾರತೀಯ ರಾಜಕೀಯದಲ್ಲಿ ಶಿವಸೇನೆ ಮತ್ತು ಎನ್‌ಸಿಪಿ ಪಕ್ಷಗಳ ಆಂತರಿಕ ಸೀಳುವಿಕೆಯ ಸಂದರ್ಭದಲ್ಲಿಯೂ ಚುನಾವಣಾ ಆಯೋಗವು ಪಕ್ಷದ ಹೆಸರು ಮತ್ತು ಚಿಹ್ನೆಗೆ ಸಂಬಂಧಿಸಿದ ವಿವಾದಗಳಲ್ಲಿ ಮಧ್ಯಂತರ ಕ್ರಮಗಳನ್ನು ಕೈಗೊಂಡಿತ್ತು.

ಆ ಪ್ರಕರಣಗಳು ಕೂಡ ಸುಪ್ರೀಂ ಕೋರ್ಟ್ ಅಂಗಳ ತಲುಪಿದ್ದವು. ಟಿಎಂಸಿಯೊಳಗಿನ ಬಿಕ್ಕಟ್ಟು ಜೂನ್‌ನಲ್ಲಿ ಬಹಿರಂಗ ಸ್ವರೂಪ ಪಡೆದುಕೊಂಡಿತ್ತು. ಜೂನ್ 22ರಂದು ರಿತಬ್ರತ ಬ್ಯಾನರ್ಜಿ ನೇತೃತ್ವದ ಬಂಡಾಯ ಶಾಸಕರ ಗುಂಪು ಪ್ರತ್ಯೇಕ ಸಭೆ ನಡೆಸಿ ಮಮತಾ ಬ್ಯಾನರ್ಜಿಯವರ ಪಕ್ಷದ ಅಧ್ಯಕ್ಷ ಸ್ಥಾನವನ್ನೇ ಪ್ರಶ್ನಿಸಿತ್ತು. ಬಂಡಾಯ ಬಣವು ತನ್ನ ಬಳಿ ಪಕ್ಷದ ಶಾಸಕರಲ್ಲಿ ಮೂರನೇ ಎರಡರಷ್ಟು ಬೆಂಬಲವಿದೆ ಎಂದು ಹೇಳಿಕೊಂಡಿತ್ತು. ಬಳಿಕ ಎರಡೂ ಬಣಗಳು ಪ್ರತ್ಯೇಕ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಪಟ್ಟಿಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿ, ಪಕ್ಷದ ಹೆಸರು, ಆಸ್ತಿ, ಬ್ಯಾಂಕ್ ಖಾತೆಗಳು ಹಾಗೂ ಚುನಾವಣಾ ಚಿಹ್ನೆಯ ಮೇಲಿನ ಹಕ್ಕು ಪ್ರತಿಪಾದಿಸಿದ್ದವು.

ಜುಲೈ ಆರಂಭದಲ್ಲಿ ರಿತಬ್ರತ ಬ್ಯಾನರ್ಜಿ ನೇತೃತ್ವದ 10 ಬಂಡಾಯ ಶಾಸಕರ ನಿಯೋಗ ಚುನಾವಣಾ ಆಯೋಗದ ಪೂರ್ಣ ಪೀಠವನ್ನು ಭೇಟಿಯಾಗಿ, ತಮಗೇ ಪಕ್ಷದ ಬಹುಮತದ ಬೆಂಬಲವಿದೆ ಎಂದು ವಾದಿಸಿತ್ತು. ಇದಕ್ಕೆ ಪ್ರತಿಯಾಗಿ ಮಮತಾ ಬಣವು, ರಾಜಕೀಯ ಪಕ್ಷದ ಸಂಘಟನೆ ಮತ್ತು ವಿಧಾನಸಭೆಯ ಶಾಸಕಾಂಗ ಪಕ್ಷವನ್ನು ಒಂದೇ ರೀತಿಯಲ್ಲಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಆಕ್ಷೇಪಿಸಿತ್ತು.

ಚುನಾವಣಾ ಆಯೋಗವು ಎರಡೂ ಬಣಗಳಿಗೆ ತಮ್ಮ ವಾದ-ಪ್ರತಿವಾದಗಳನ್ನು ಸಲ್ಲಿಸಲು ಅವಕಾಶ ನೀಡಿತ್ತು. ಸೆ.17ರಂದು ಆಯೋಗವು ಟಿಎಂಸಿಯ ಮೂಲ ಹೆಸರು ಮತ್ತು 'ಹೂವು-ಹುಲ್ಲು' ಚಿಹ್ನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಎರಡೂ ಬಣಗಳಿಗೆ ಪ್ರತ್ಯೇಕ ಹೆಸರು

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka